15 February 2026 Sunday
SINCE 1957
ನಾಡಿನ ಜನತೆಗೆ ಮಹಾಶಿವರಾತ್ರಿ ಶುಭಾಶಯಗಳು
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನ ಎಂದರೆ ಹಣೆಬರಹವು ಬರೆದ ರೀತಿಯಲ್ಲಿ ಮುನ್ನಡೆಯುವ ಒಂದು ಯಾತ್ರೆ!

-ಸ್ನೇಹಾ ಆನಂದ್

info.varthaman@gmail.com


ನೂರಕ್ಕೂ ಹೆಚ್ಚು ಮುಸ್ಲಿಂ ಜೋಡಿಗಳ ಸಾಮೂಹಿಕ ವಿವಾಹ — ಪುಟ ಸಂ. 2


ಸಾವಿರ ದಿನದ ಸಾಧನೆ ಹುಚ್ಚು ಮದುವೆಯಲ್ಲಿ ಉಂಡವನೇ ಜಾಣ: ಎನ್.ಮಹೇಶ್ — ಪುಟ ಸಂ. 3


ಇಂದಿನಿಂದ ಕಪ್ಪಡಿ ಜಾತ್ರೆ: ಶಿವರಾತಿ ದಿನದಿಂದ ಒಂದು ತಿಂಗಳ ಜಾತ್ರೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 101 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3





## ಸಾವಿರಾರು ಭಕ್ತರ ಸಮ್ಮುಖದಲ್ಲಿ ಚಾಲಿಸ್ ಪಾರಾಯಣ

# ಮೊಳಗಿದ ಸಾಮೂಹಿಕ ಹನುಮಾನ್ ಸ್ಮರಣೆ

**ಮೈಸೂರು:** ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಶ್ರೀಗಳ ನೇತೃತ್ವದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಹನು ಮಾನ್ ಚಾಲೀಸಾ ಪಾರಾಯಣ ಯಜ್ಞ ಕಾರ್ಯಕ್ರಮ ನಡೆಯಿತು.

ಶನಿವಾರ ಬೆಳಿಗ್ಗೆ 10.50ಕ್ಕೆ ಪಾರಾಯಣಕ್ಕೆ ಶ್ರೀಗಳು ಚಾಲನೆ ನೀಡಿದರು. ಸಾವಿರಾರು ಮಂದಿ ಸಾಮೂಹಿಕವಾಗಿ ಹನುಮಾನ್ ಚಾಲೀಸಾ ಪಠಣ ಮಾಡಿದರು. ಎಲ್ಲೆಡೆ ಕೇಸರಿ ಧ್ವಜಗಳು ಹಾರಾಡಿದವು. ಆಶೀರ್ವಚನ ನೀಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು, ಸುಂದರಕಾಂಡ ಅಧ್ಯಾ ಯದ ಕುರಿತು ತುಳಸಿ ದಾಸರು 40 ಶ್ಲೋಕಗಳನ್ನು ರಚಿಸಿದ್ದಾರೆ. ಅದರ ಪಾರಾ ಯಣದಿಂದ ಪುಣ್ಯ ಲಭಿಸುತ್ತದೆ. ಹನುಮನನ್ನು ಭಜಿಸಿ ದರೆ ಭಯ ದೂರವಾಗಿ ಶಕ್ತಿ ಸಿಗುತ್ತದೆ ಎಂದು ತಿಳಿಸಿದರು.

ಅವಧೂತ ದತ್ತ ಪೀಠದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ಸ್ವಾಮೀಜಿ ಮಾತನಾಡಿ, ಸುಂದರಕಾಂ ಡದಲ್ಲಿ ಹನುಮಂತನೇ ಹೇಳುವಂತೆ ಸ್ವಾಮಿಯ ದರ್ಶ ನದಿಂದ ಎಲ್ಲ ಕಷ್ಟಗಳು ದೂರ ಆಗುತ್ತವೆ. ಭಕ್ತರನ್ನು ಧರ್ಮ ಮಾರ್ಗದಲ್ಲಿ ಕೊಂಡೊಯ್ಯಲು ಗಣ ಪತಿ ಸಚ್ಚಿದಾನಂದ ಶ್ರೀಗಳ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆದಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಆಂಜನೇಯಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಬೆಳಿಗ್ಗೆ ವಿವಿಧ ಪೂಜಾ ಕಾರ್ಯ ಕ್ರಮಗಳು ನಡೆದವು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾವಿರಾರು ಭಕ್ತರಿಗೆ ಹನುಮ ರಕ್ಷೆಯನ್ನು ವಿತರಿಸಲಾಯಿತು. ಭಕ್ತರಿಗೆ ಕುಡಿಯುವ ನೀರು, ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಸುಂದರಕಾಂಡದ ಕಥಾ ನಿರೂಪಣೆಯ ಜತೆಯಲ್ಲೇ ನಿರಂತರವಾಗಿ ಎರಡು ಗಂಟೆಗಳ ಕಾಲ ಪಾರಾಯಣ ನೆರವೇರಿತು. ಮೈದಾನದಲ್ಲಿದ್ದ ಸಹಸ್ರಾರು ಜನರು ಏಕಕಾಲಕ್ಕೆ

ಪುಟ 2ಕ್ಕೆ

## ಪವಮಾನ ಹೋಮ: ವೇದಘೋಷ

**ಮೈಸೂರು:** ಹನುಮಾನ್ ಚಾಲೀಸಾ ಪಾರಾಯಣದ ಭಾಗವಾಗಿ ವೇದಿಕೆ ಸಮೀಪದ ಪವಮಾನ ಹೋಮ ನೆರವೇರಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಗಣ್ಯರೊಂ ದಿಗೆ ಹೋಮಕ್ಕೆ ಪೂರ್ಣಾಹುತಿ ಸಲ್ಲಿಸಿದರು.

ಆಶ್ರಮದ ವೇದ ಶಾಲೆಯ ಪ್ರಮುಖರ ನೇತೃ ತ್ವದಲ್ಲಿ ಮುಂಜಾನೆಯಿಂದಲೇ ಶಾಸ್ತ್ರೋಕ್ತವಾಗಿ ಹೋಮ ಕಾರ್ಯಗಳು ನೆರವೇರಿದವು. ಪೂರ್ಣಾಹುತಿಯ ವೇಳೆ ವೇದ ಘೋಷಗಳು ಮೊಳಗಿದವು. ಶ್ರೀ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞದ ಸಂದರ್ಭ ದಲ್ಲಿ ಇಡೀ ಮಹಾರಾಜ ಕಾಲೇಜು ಮೈದಾನ ಕೇಸರಿ ಮಯವಾಗಿ ಮಾರ್ಪಟ್ಟಿತ್ತು. ಭಕ್ತರು

ಕುಳಿತಲ್ಲೇ ಧ್ವಜ ಬೀಸುತ್ತ ಚಾಲೀಸ ಹಾಡಿದರು. ದೇಶ, ವಿದೇಶದ ಹಲವು ಹನುಮ ಭಕ್ತರು ಭಗವದ್ಧ್ವಜ ಹಿಡಿದು ನೃತ್ಯ ಮಾಡುವುದರಲ್ಲಿ ತಲ್ಲೀನರಾಗಿದ್ದರು. ಪ್ರಧಾನ ವೇದಿಕೆಗೆ ಹೊಂದಿಕೊಂಡಂತೆ ಜನರು ಕುಳಿತಿರುವ ಆಸನಗಳ ಅಂತ್ಯದವರೆಗೂ ಸಭಾಂಗಣದ ಮಧ್ಯಭಾಗದಲ್ಲಿ ರ್‍ಯಾಂಪ್ ನಿರ್ಮಿಸಲಾಗಿತ್ತು. ಪಾರಾಯಣದ ನಡುವೆ ಸ್ವಾಮೀಜಿ ರ್‍ಯಾಂಪ್‌ನಲ್ಲಿ ಸಾಗಿ ಬಂದು ಭಕ್ತರನ್ನು ಹುರಿದುಂಬಿಸಿದರು.

# ನಮ್ಮದು ನುಡಿದಂತೆ ನಡೆದ ಸರ್ಕಾರ

## ಸಾವಿರ ದಿನಗಳ ಸಂಭ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

**ಹಾವೇರಿ:** ರಾಜ್ಯದ ಕಾಂಗ್ರೆಸ್ ಸರ್ಕಾರ ಸಾವಿರ ದಿನಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ನಾವು ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಸರ್ಕಾರ 1000 ದಿನಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಹಾವೇರಿಯಲ್ಲಿ ಶನಿವಾರ ಆಯೋಜಿಸಿದ್ದ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದಲ್ಲಿ ಭಾಗವಹಿಸುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಸರ್ಕಾರ ತನ್ನ ಬದ್ಧತೆಗಳನ್ನು ಈಡೇರಿಸಿದೆ ಮತ್ತು ಅದರ ಕಲ್ಯಾಣ ಕಾರ್ಯಕ್ರಮಗಳು ಮುಂದುವರಿಯುತ್ತವೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ದಲಿತರು, ಮಹಿಳೆಯರು, ಹಿಂದುಳಿದ ವರ್ಗಗಳು ಮತ್ತು ರೈತರು ಸೇರಿದಂತೆ ಅಂಚಿನಲ್ಲಿರುವವರ ಕಲ್ಯಾಣ ಮತ್ತು ಸಬಲೀಕರಣದ ಮೇಲೆ ಕೇಂದ್ರೀಕರಿಸುತ್ತದೆ. ನಾವು ಅವುಗಳನ್ನು ಕಾರ್ಯಗತಗೊಳಿಸುವುದನ್ನು ಮುಂದುವರಿಸುತ್ತೇವೆ. ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಅಂಚಿನಲ್ಲಿರುವ ವರ್ಗಗಳ ಸಬಲೀಕರಣದ ಗುರಿಯನ್ನು ಹೊಂದಿವೆ ಎಂದು ಸಿದ್ದರಾಮಯ್ಯ ತಿಳಿಸಿದರು.




### ಸಿಎಂ ಪುತ್ಥಳಿ ಅನಾವರಣ

ಹಾವೇರಿ ಸಮಾವೇಶ ವೇದಿಕೆಯಲ್ಲಿ ಸಿಎಂ ಪುತ್ತಳಿ ಅನಾವರಣಗೊಳಿಸಲಾಗಿದೆ. ವಿಧಾನಸೌಧದ ಮುಂಭಾಗದಲ್ಲಿ ಸಿಎಂ ಸಿದ್ದರಾಮಯ್ಯ ನಿಂತಂತೆ ಪುತ್ಥಳಿ ರಚನೆಯಾಗಿದೆ. ಗೊಟಗೋಡಿ ರಾಕ್ ಗಾರ್ಡನ್ ಮುಖ್ಯಸ್ಥ ದಾಸನೂರ್ ಈ ಪುತ್ಥಳಿ ಕೊಡುಗೆ ನೀಡಿದ್ದಾರೆ. ತನ್ನದೇ ಪುತ್ಥಳಿ ನೋಡಿ ಡಿಸಿಎಂ ಮಂದಹಾಸ ಬೀರಿದರು.

ಕಾಂಗ್ರೆಸ್ ಸರ್ಕಾರದ 1,000 ದಿನಗಳನ್ನು ಕತ್ತಲೆಯ ದಿನಗಳು ಎಂದು ಟೀಕಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಟೀಕೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಕಳೆದ ನಾಲ್ಕು ವರ್ಷಗಳಲ್ಲಿ ಅವರು ಏನನ್ನೂ ಮಾಡದ ಕಾರಣ ಅವರಿಗೆ ಹೊಟ್ಟೆ ಉರಿ. ಅದಕ್ಕಾಗಿಯೇ ಅವರು ನಮ್ಮನ್ನು ಟೀಕಿಸುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಪುಟ 2ಕ್ಕೆ

### ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 141 ಸ್ಥಾನ: ಡಿಕೆಶಿ


**ಹಾವೇರಿ:** ಮುಂಬರುವ 2028ರ ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 141 ಸೀಟುಗಳು ಬರಲಿವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯ ಸರ್ಕಾರದ ಸಾವಿರ ದಿನಗಳ ಸಾಧನಾ ಸಮಾವೇಶ ಹಾಗೂ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದಲ್ಲಿ ಮಾತನಾಡಿದರು. ಈ ಬಾರಿ ಚುನಾವಣೆಯಲ್ಲಿ ನ ವ ಂ ಗೆ 136

ಪುಟ 2ಕ್ಕೆ

# ಕೋಟ್ಯಂತರ ಬೆಲೆ ಬಾಳುವ ಕೆರೆ ಜಾಗ ಅತಿಕ್ರಮಣ ತೆರವು

**ಮೈಸೂರು:** ನಗರದ ಚಾಮುಂಡಿ ಬೆಟ್ಟದ ರಸ್ತೆಯ ಕೆ.ಸಿ.ಲೇಔಟಿನಲ್ಲಿ ಸರ್ವೆ ನಂಬರ್ 4ರಲ್ಲಿ ಸರ್ಕಾರಿ ಜಾಗ ಅತಿಕ್ರಮಣವನ್ನು ಶನಿವಾರ ತೆರವು ಮಾಡಲಾಯಿತು. ಶಿವರಾತ್ರಿ ವರೆಗೆ ತೆರವುಗೊಳಿಸದಿದ್ದರೆ ಹೋರಾಟ ನಡೆಸುವುದಾಗಿ ಶಾಸಕ ಶ್ರೀವತ್ಸ ಎಚ್ಚರಿಕೆ ನೀಡಿದ ಬೆನ್ನಲ್ಲೇ ಶನಿವಾರ ತಹಸೀಲ್ದಾರ್ ನೇತೃತ್ವದ ಅಧಿಕಾರಿಗಳ ತಂಡ ಒತ್ತುವರಿ ತೆರವುಗೊಳಿಸಿದರು.

ಮೈಸೂರು ತಾಲ್ಲೂಕು ದಂಡಾಧಿಕಾರಿ ಮಹೇಶ್ ಮತ್ತು ಸರ್ವೆ ಇಲಾಖೆ ಸಿಬ್ಬಂದಿಗಳ ಸ್ಥಳಕ್ಕೆ ದಾವಿಸಿ ಪರಿಶೀಲನೆ ನಡೆಸಿ ಅಳತೆ ಮಾಡಿ ಮೇಲ್ನೋಟಕ್ಕೆ ಅಕ್ರಮ ಒತ್ತುವರಿ ಕಂಡುಬರುತ್ತದೆ. ಹಾಗಾಗಿ ಅಕ್ರಮವಾಗಿ ನಿರ್ಮಾಣ ಮಾಡಿಕೊಂಡಿದ್ದ ಕಾಂಪೌಂಡ್, ಬೋರ್ಡ್ ಎಲ್ಲವನ್ನೂ ತೆರವು ಮಾಡಲಾಯಿತು.

ಜೆಸಿಬಿ ಯಂತ್ರದ ಮೂಲಕ ಬೋರ್ಡ್ ಮತ್ತು ಕಾಂಪೌಂಡ್ ಎಲ್ಲವನ್ನೂ ಕಿತ್ತುಹಾಕಿದರು.

ಒತ್ತುವರಿ ಮಾಡಿಕೊಂಡಿದ್ದ 6.10 ಎಕರೆ ಸಂಪೂರ್ಣ ಕೆರೆಯ ಜಾಗವಾಗಿದೆ. ಈಗಾಗಲೇ ಕೆರೆ ಜಾಗದಲ್ಲೇ ಕೆಲವರು ಮನೆಯನ್ನು ಕಟ್ಟಿಕೊಂಡಿದ್ದಾರೆ. ಕೆಲವರು ನಿವೇಶನ ಮಾಡಿಕೊಂಡಿದ್ದಾರೆ. ದಾಖಲೆಗಳ ಪ್ರಕಾರ ಕೆರೆಯಾಗಿದೆ. ಪರಿಶೀಲನೆ ಮಾಡಿ ಅಕ್ರಮ ಅತಿಕ್ರಮಣವೇನಾದರೂ ಆಗಿದ್ದರೆ ಎಲ್ಲವನ್ನೂ ತೆರವು ಮಾಡಲಾಗುತ್ತದೆ ಎಂದು ತಹಶಿಲ್ದಾರ್ ಮಹೇಶ್ ತಿಳಿಸಿದ್ದಾರೆ.

ಶಾಸಕ ಶ್ರೀವತ್ಸ ಮಾತನಾಡಿ, ಕೆಸಿ ಲೇಔಟಿ ಕುರುಬಾರಹಳ್ಳಿ ಸರ್ವೆ ನಂಬರ್ 4,36,37,47 ಮತ್ತು75 ರಲ್ಲಿ ವಿಶೇಷ ಕೃಷಿ ವಲಯವಾಗಿದ್ದ ಭೂಮಿಯನ್ನು ವಸತಿ ವಲಯವನ್ನಾಗಿ ಭೂ ಪರಿವರ್ತನೆ ಮಾಡಿದ್ದಾರೆ. ಅದರಲ್ಲಿ ರಾಯ್ ಪೀಟರ್ ಎಂಬುವವರಿಗೆ ಸೇರಿದ 3.17 ಎಕರೆ ಭೂ ಪ್ರದೇಶದ ಎಂದು ಬೋರ್ಡ್ ಅಳವಡಿಸಿ ಇದು ಖಾಸಗಿ ಆಸ್ತಿ ಎಂದು ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದರು.

ಸ್ಥಳೀಯರಿಂದ ಶಾಸಕರ ಗಮನಕ್ಕೆ ತಂದು ಈ ಆಸ್ತಿಯನ್ನು ಖಾಸಗಿ ವ್ಯಕ್ತಿಗಳು

ಪುಟ 2ಕ್ಕೆ

## ಕೊರಿಯನ್ ಗೇಮ್ ಗೀಳಿಗೆ ಯುವಕ ಬಲಿ

**ಧಾರವಾಡ:** ಕೊರಿಯನ್ ಗೇಮ್ ಗೀಳಿಗೆ ಯುವಕ ಬಲಿಯಾದ ಘಟನೆ ಧಾರವಾಡದ ಮಂಗಳಗಟ್ಟಿಯಲ್ಲಿ ನಡೆದಿದೆ. ನೇಣಿಗೆ ಶರಣಾದ ಯುವಕನನ್ನು ವಿಕಾಸ್ (20) ಎಂದು ಗುರುತಿಸಲಾಗಿದೆ.



ಯುವಕನ ಸಾವಿನ ನಂತರ ಮೊಬೈಲ್‌ನ್ನು ಪೊಲೀಸರು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ ವೇಳೆ ಕೊರಿಯನ್ ಗೆಮ್ಸ್ ಪತ್ತೆಯಾಗಿದೆ. ಕೊರಿಯನ್ ಗೇಮ್ಸೆ ವಿಕಾಸ್ ಅಡಿಕ್ಟ್ ಆಗಿದ್ದ ಎಂಬ ವಿಚಾರ ತನಿಖೆ ವೇಳೆ ಬೆಳಕಿಗೆ ಬಂದಿದೆ. ಪಿಯುಸಿ ಸೈನ್ಸ್ ಮುಗಿಸಿ ಮನೆಯಲ್ಲೇ ಇದ್ದ ವಿಕಾಸ್

ಪುಟ 2ಕ್ಕೆ

## ಬಂಧಿತ ಶಾಸಕ ಬೈರತಿ ಬಸವರಾಜ್ ಆಂಜಿಯೋಗ್ರಾಂ


**ಬೆಂಗಳೂರು:** ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಶಾಸಕ ಬೈರತಿ ಬಸವರಾಜ್ ಅವರಿಗೆ ಜಯದೇವ ಆಸ್ಪತ್ರೆಯಲ್ಲಿ ಆಂಜಿಯೋಗ್ರಾಂ ನಡೆಸಲು ಸಿದ್ಧತೆ ಮಾಡಲಾಗಿದೆ. ಆರೋಗ್ಯ ತಪಾಸಣೆ ವೇಳೆ ಇಸಿಜಿಯಲ್ಲಿ ವ್ಯತ್ಯಾಸ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.



ಇಸಿಜಿಯಲ್ಲಿ ವ್ಯತ್ಯಾಸ ಕಂಡು ಬಂದ ಬೆನ್ನಲ್ಲೇ ಅವರನ್ನು ಐಸಿಯು ವಾರ್ಡ್ಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯಕೀಯ ಪರೀಕ್ಷೆಗಳನ್ನು ಸಹ ವೈದ್ಯರು ನಡೆಸಿದ್ದಾರೆ. ಆಸ್ಪತ್ರೆಯಲ್ಲಿರೋ ಬಸವರಾಜ್ ಅವರ ಕೊಠಡಿಗೆ

ಪುಟ 2ಕ್ಕೆ

## ಶಿವರಾತ್ರಿ ಆಚರಣೆಗೆ ಸಿದ್ಧತೆ



**ಮೈಸೂರು:** ಸಾಂಸ್ಕೃತಿಕ ನಗರದಲ್ಲಿ ಶಿವರಾತ್ರಿ ಆಚರಣೆಗೆ ಸಕಲ ಸಿದ್ಧತೆ ನಡೆದಿದೆ. ತ್ರಿನೇತ್ರೇಶ್ವರ ದೇವಾಲಯದ ಹೊರತಾಗಿಯೂ ನಗರದ ಅನೇಕ ಇತಿಹಾಸ ಪ್ರಸಿದ್ಧ ಶಿವನ ದೇವಾಲಯಗಳು ಶಿವರಾತ್ರಿ ಸಂಭ್ರಮಕ್ಕೆ ಸಜ್ಜಾಗಿವೆ.

ರಾಮಾನುಜ ರಸ್ತೆಯ

ಪುಟ 2ಕ್ಕೆ

## ಮಾದಕ ವಸ್ತು ವಶ: ಆರೋಪಿ ಬಂಧನ

**ಮೈಸೂರು:** ನಗರದಲ್ಲಿ ಅಕ್ರಮ ಮಾದಕ ವಸ್ತು ಮಾರಾಟ ಮತ್ತು ಸಾಗಾಟದ ಮೇಲೆ ಮಂಡಿ ಠಾಣಾ ಪೊಲೀಸರಿಂದ ಕಾರ್ಯಾಚರಣೆ ಮುಂದುವರೆದಿದೆ. ಪೊಲೀಸರು ದಾಳಿ ನಡೆಸಿ 4 ಲಕ್ಷ ಮೌಲ್ಯದ 41.31 ಗ್ರಾಂ ಮಾದಕ ವಸ್ತು ಎಂ.ಡಿ.ಎಂ.ಎ ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.



ನಗರದ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮ ಮಾದಕ ವಸ್ತು ಮಾರಾಟ ಮತ್ತು ಸಾಗಾಟದ ಮೇಲೆ ನಗರದ ಮಂಡಿ ಠಾಣಾ ಪೊಲೀಸರು ದಾಳಿ ನಡೆಸಿದ್ದಾರೆ. ಫೆ.11ರಂದು 3.14 ಗ್ರಾಂ

ಪುಟ 2ಕ್ಕೆ

## ಯತ್ನಾಳ್ ಗೆಲುವಿಗೆ ಸುಪ್ರೀಂನಲ್ಲೂ ಮನ್ನಣೆ

**ನವದೆಹಲಿ:** ಕಳೆದ ವಿಧಾನಸಭಾ ಚುನಾವಣೆಯಲ್ಲಿ ವಿಜಯಪುರ ಕ್ಷೇತ್ರದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ



ಕಾನೂನು ಹೋರಾಟ ನಡೆಸುತ್ತಿದ್ದ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಅಬ್ದುಲ್ ಹಮೀದ್ ಮುಶ್ರೀಫ್ ಗೆ ಸುಪ್ರೀಂ ಕೋರ್ಟ್ನಲ್ಲೂ ಮುಖಭಂಗವಾಗಿದೆ.

ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಕಳೆದ ಚುನಾವಣೆಯಲ್ಲಿ ಯತ್ನಾಳ್ ಅಕ್ರಮ ಎಸಗಿ ಗೆಲುವು ಸಾಧಿಸಿದ್ದಾರೆ ಎಂದು ಆರೋಪಿಸಿ ಅಬ್ದುಲ್ ಹಮೀದ್ ಮುಶ್ರೀಫ್

ಪುಟ 2ಕ್ಕೆ


# ಪಂಚರ್ ಆದ ಸಿದ್ದು ಪಂಚ ಗ್ಯಾರಂಟಿ

## ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ವಾಗ್ದಾಳಿ

**ಬೆಂಗಳೂರು:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳು ಪಂಚರ್ ಆಗಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾಂಗ್ರೆಸ್ ಸಾಧನಾ ಸಮಾವೇಶದ ಬಗ್ಗೆ ಲೇವಡಿ ಮಾಡಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಸಾವಿರ ದಿನಗಳ ಸಾಧನಾ ಸಮಾವೇಶದ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯವನ್ನು ಸಿದ್ದರಾಮಯ್ಯ ಕುಡುಕರ ರಾಜ್ಯ ಮಾಡ್ತಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಮಹಾತ್ಮಾ ಗಾಂಧಿಗೆ ಅಪಮಾನ ಮಾಡಲಾಗಿದೆ. ನೂರು ಸುಳ್ಳು ಹೇಳಿ ಮದುವೆ ಮಾಡು ಎನ್ನುವಂತೆ ಸಾವಿರ ಸುಳ್ಳು ಹೇಳಿ ನಾಡಿನ ಜನರಿಗೆ ಅನ್ಯಾಯ ಎಸಗಿದ್ದಾರೆ. ಅಹಿಂದ ಹೆಸರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ, ಒಕ್ಕಲಿಗ ಸಮುದಾಯಗಳಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ರಾಮರಾಜ್ಯ ಮಾಡ್ತೀವಿ ಎಂದು ಅಧಿಕಾರಕ್ಕೆ ಬಂದು, ಜನರ ಕಿವಿಗೆ ಹೂ ಮುಡಿಸಿದ್ದಾರೆ. ವಾಲ್ಮೀಕಿ ನಿಗಮ ಹಗರಣ, ಅಬಕಾರಿ, ಸ್ಮಾರ್ಟ್ ಮೀಟರ್ ಹಗರಣ, ಗೃಹಲಕ್ಷ್ಮಿ ಹಗರಣ, ಮುಡಾ ಹಗರಣಗಳನ್ನು ಮಾಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯ 5 ಸಾವಿರ ಕೋಟಿ ರೂ. ಎಲ್ಲಿಗೆ ಹೋಗಿದೆ ಎಂದು ಸಿಎಂ ಇನ್ನೂ ಉತ್ತರ ಕೊಟ್ಟಿಲ್ಲ. ಭ್ರಷ್ಟಾಚಾರದಲ್ಲಿ ಸರ್ಕಾರ ಮುಳುಗಿದೆ. ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯವನ್ನು ಸರ್ಕಾರ ಅಡ ಇಟ್ಟಿದೆ ಎಂದು ಕಿಡಿಕಾರಿದರು.



ಗ್ಯಾರಂಟಿಗಳಿಂದ ಜನರ ಸಬಲೀಕರಣ ಆಗಿದೆ ಅಂತ ಬಡಾಯಿ ಕೊಚ್ಚಿಕೊಳ್ತಾರೆ. ರಸ್ತೆ ಗುಂಡಿಗಳನ್ನು ಮುಚ್ಚಲೂ ಈ ಅಯೋಗ್ಯ ಕಾಂಗ್ರೆಸ್ ಸರ್ಕಾರದಿಂದ ಆಗಿಲ್ಲ. ಇವರ ಸಾಧನೆ ಅಂದರೆ ಭ್ರಷ್ಟಾಚಾರಕ್ಕೆ ಸಾಂಸ್ಥಿಕ ರೂಪ ಕೊಟ್ಟಿರೋದು. ಈ ಕಾಂಗ್ರೆಸ್ ಸರ್ಕಾರ ಕಳೆದ ಎರಡೂ ಮುಕ್ಕಾಲು ವರ್ಷದಲ್ಲಿ

ಪುಟ 2ಕ್ಕೆ

## ಪೆಟ್ರೋಲ್ ಬಂಕ್‌ಗೆ ನುಗ್ಗಿ ದರೋಡೆ

### ಕಾರಿನಲ್ಲಿ ಬಂದಿದ್ದ ಐವರಿಂದ ಇಬ್ಬರು ಸಿಬ್ಬಂದಿ ಮೇಲೆ ಹಲ್ಲೆ



**ಮೈಸೂರು:** ಐವರು ದುಷ್ಕರ್ಮಿಗಳ ಗ್ಯಾಂಗ್ ತಡರಾತ್ರಿ ಮಾರಕಾಸ್ತ್ರ ಹಿಡಿದು ಪೆಟ್ರೋಲ್ ಬಂಕ್‌ಗೆ ನುಗ್ಗಿ ದರೋಡೆ ಮಾಡಿರುವ ಘಟನೆ ಹುಣಸೂರು ಹೆದ್ದಾರಿಯ ಬಿಳಿಕೆರೆ ಸಮೀಪದ ಸ್ವಾಮಿ ಸರ್ವಿಸ್ ಸ್ಟೇಷನ್‌ನಲ್ಲಿ ನಡೆದಿದೆ.

ಪೆಟ್ರೋಲ್ ಬಂಕ್‌ಗೆ ನುಗ್ಗಿ ಇಬ್ಬರು ಸಿಬ್ಬಂದಿ ಮೇಲೆ ಹಲ್ಲೆ ಮಾಡಿ 15,300 ರೂ. ದರೋಡೆ ಮಾಡಿದ್ದಾರೆ. ನಿನ್ನೆ ಮಧ್ಯರಾತ್ರಿ ಸುಮಾರಿಗೆ ದರೋಡೆ ನಡೆದಿದೆ. ದರೋಡೆ ಹಾಗೂ ಹಲ್ಲೆಯ ದೃಶ್ಯಗಳು ಸಿಸಿ ಕ್ಯಾಮೆರಾದಲ್ಲಿ

ಪುಟ 2ಕ್ಕೆ

# ರಾಜ್ಯ ಸರ್ಕಾರ ತೆಗೆಯೋದು ಅಜೆಂಡಾ


## ಸಿಎಂ ಹುದ್ದೆ ಚರ್ಚೆ ಮುಖ್ಯವಲ್ಲ: ಛಲವಾದಿಗೆ ಎಚ್.ಡಿ.ಕೆ ತಿರುಗೇಟು

**ಬೆಂಗಳೂರು:** ರಾಜ್ಯದ ಭ್ರಷ್ಟ, ಕೆಟ್ಟ ಸರ್ಕಾರವನ್ನು ತೆಗೆಯೋದು ನನ್ನ ಅಜೆಂಡಾ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿ– ಜೆಡಿಎಸ್ ಮೈತ್ರಿ ವಿಚಾರವಾಗಿ 113 ಸ್ಥಾನ ಪಡೆದು ಕುಮಾರಸ್ವಾಮಿ ಬೇಕಾದರೆ ಸಿಎಂ ಆಗಲಿ ಎಂಬ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಅವರು, ನಾನು ಇಲ್ಲಿವರೆಗೂ ನಿಮ್ಮ ಮುಂದೆ ನೂರು ಬಾರಿ ಹೇಳಿದ್ದೇನೆ. ರಾಜ್ಯದಲ್ಲಿ ಇರುವ ಇಂತಹ ಕೆಟ್ಟ ಸರ್ಕಾರ ತೆಗೆಯಬೇಕು ಎಂಬುದು ಮೊದಲ ಆದ್ಯತೆ. ಮುಖ್ಯಮಂತ್ರಿ ಆಗುವುದು ಆಮೇಲೆ ಯೋಚಿಸೋಣ. ಈ ರಾಜ್ಯದಲ್ಲಿ ಉತ್ತಮವಾದ ಸರ್ಕಾರ, ಜನಪರವಾದ ಸರ್ಕಾರ, ಜನತಾ ಸರ್ಕಾರ ಬರಬೇಕು ಅನ್ನೋದು ನನ್ನ ಅಭಿಪ್ರಾಯ ಎಂದು ಹೇಳಿದರು.

ಜನರ ಭಾವನೆಗೆ ಸ್ಪಂದಿಸುವ ಸರ್ಕಾರ ಬೇಕು. ಇಂತಹ ಭ್ರಷ್ಟ ಸರ್ಕಾರ ತೆಗೆಯಬೇಕು ಎಂಬುದು ನನ್ನ ಅಜೆಂಡಾ. ಇಲ್ಲಿ ಮುಖ್ಯಮಂತ್ರಿ ಯಾರು ಆಗ್ತಾರೆ ಅನ್ನೋದು ಮುಖ್ಯವಲ್ಲ. ಕೂಸು ಹುಟ್ಟೋಕು ಮುನ್ನ ಕುಲಾವಿ ಹೊಲಿಸಿದರು ಅಂತ ಯಾಕೆ ಬೇಕು. ಇನ್ನೂ ಎರಡು ವರ್ಷ ಇದೆ. ಬಹಳ ಶ್ರಮ ಹಾಕೋದಿದೆ. ಯಾರೋ ನಾಲ್ಕು ಜನ ಮಾತಾಡಿದ್ದಕ್ಕೆ ಉತ್ತರ ಕೊಟ್ಟರೆ ಅದಕ್ಕೆ ಪ್ರಬುದ್ಧತೆ ಇಲ್ಲ ಅಂತಾರೆ ಎಂದು ಟೀಕಿಸಿದರು.

ಜಿಬಿಎ ಚುನಾವಣೆ ಮೈತ್ರಿ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಜಿಬಿಎ ಚುನಾವಣೆ ಮೈತ್ರಿ ಆಗೋ ಬಗ್ಗೆ ಈವರೆಗೂ ಯಾವುದೇ ಚರ್ಚೆ ಆಗಿಲ್ಲ. ಎಲ್ಲಾ ಪಕ್ಷಗಳು ಜಿಬಿಎ, ಸ್ಥಳೀಯ ಸಂಸ್ಥೆ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಚುನಾವಣೆ ಆಗ್ತಿದೆ. ನಮ್ಮ ಪಕ್ಷ ಜಿಬಿಎ ವಿಷಯ ಂದಲ್ಲಿ ಏನೇನು ನಿ ಧ ರ್ಾ ರ ವ ಾ ಡ ಬ ೇ ಕ ು



ಪುಟ 2ಕ್ಕೆ

# ನೂರಕ್ಕೂ ಹೆಚ್ಚು ಮುಸ್ಲಿಂ ಜೋಡಿಗಳ ಸಾಮೂಹಿಕ ವಿವಾಹ

## ಸ್ಪೀಕರ್ ಯು.ಟಿ.ಖಾದರ್, ಸಚಿವ ರಹೀಂ ಖಾನ್ ಭಾಗಿ | ಶಾಸಕ ಇಕ್ಬಾಲ್ ಹುಸೇನ್‌ರಿಂದ ಆಯೋಜನೆ

ರಾಮನಗರ: ಜಿಲ್ಲಾದ್ಯಂತ ಆಗಮಿಸಿದ್ದ ಮುಸ್ಲಿಂ ಸಮುದಾಯದ 100ಕ್ಕೂ ಹೆಚ್ಚು ವಧು-ವರರು ನೂತನ ಜೀವನಕ್ಕೆ ಅಡಿ ಇಟ್ಟರು.

ನಗರದ ಯಾರಬ್ ನಗರದಲ್ಲಿ ಶಾಸಕ ಇಕ್ಬಾಲ್ ಹುಸೇನ್ ಈ ಸಾಮೂಹಿಕ ವಿವಾಹವನ್ನು ಆಯೋಜಿಸಿದ್ದರು.

ಯಾರಬ್ ನಗರದಲ್ಲಿ ಅಳವಡಿಸಲಾಗಿದ್ದ ವೇದಿಕೆಯಲ್ಲಿ ವರರು ಆಸೀನರಾದರೆ, ಸುಲ್ತಾನ್ ಪ್ಯಾಲೇಸ್‌ನಲ್ಲಿ ಎಲ್ಲ ವಧುಗಳು ಇದ್ದರು. ಮೌಲ್ವಿ ಮೌಲಾನ ಹಜರತ್ ಅಲಿ ಖಾನ್ ರವರ ಸಮ್ಮುಖದಲ್ಲಿ ವಧು ಮತ್ತು ವರರಿಬ್ಬರು ತಮ್ಮ ಮಧುವೆಗೆ ಕಬೂಲ್ ಹೈ ಎಂದು ಒಪ್ಪಿಗೆ ಸೂಚಿಸಿದರು. ತದ ನಂತರ ನಿಕಾಹ್ ನಾಮ (ವಿವಾಹ) ನಡೆಯಿತು. ಕುರಾನ್ ಪ್ರಕಾರ ವರ ಮತ್ತು ವಧುವಿನ ಕರ್ತವ್ಯಗಳನ್ನು ವಧು ಮತ್ತು ವರನ ಕುಟುಂಬಗಳಿಂದ ತಲಾ ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಪಠಿಸಲಾಯಿತು. ಅಧಿಕೃತ ವಿವಾಹಕ್ಕೆ ಸಹಿ ಹಾಕಿದ ನಂತರ, ಖುತ್ಬಾ ಪಠಿಸಲಾಯಿತು.



ಕೊನೆಯಲ್ಲಿ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ಪೌರಾಡಳಿತ ಸಚಿವ ರಹೀಂ ಖಾನ್ , ಕೆಪಿಸಿಸಿ ಉಪಾಧ್ಯಕ್ಷ ಸೈಯದ್ ಜಿಯಾವುಲ್ಲಾ ಸೇರಿದಂತೆ ಹಲವಾರು ಗಣ್ಯರು, ಧರ್ಮಗುರುಗಳು, ಹಿರಿಯರು ನವ ವಧು ಮತ್ತು ವರರಿಗೆ ಆಶೀರ್ವದಿಸಿದರು.

ಈ ಮದುವೆ ಕಾರ್ಯದಲ್ಲಿ ಶಾಸಕ ಇಕ್ಬಾಲ್ ಹುಸೇನ್ ರವರು ಎಲ್ಲ ನವ ವಧುಗಳಿಗೆ ತಲಾ ನಾಲ್ಕು ಜೊತೆ ಸೀರೆಗಳು, ಕಾಲು ಚೈನ್, ವರರಿಗೆ ಜುಬ್ಬಾ-ಪೈಜಾಮ, ಜಾಕೆಟ್, ಟೋಪಿ, ವಾಚ್, ಮನೆಗೆ ಅನುಕೂಲವಾಗುವಂತೆ ಅಲ್ಮೇರಾ, ಪಲ್ಲಂಗ, ಗಾದಿ ಹಾಗೂ ಹೊದಿಕೆಗಳು ಹಾಗು ದಿನಬಳಕೆಯ ಪಾತ್ರೆಗಳನ್ನು ಕೊಡುಗೆಯಾಗಿ ನೀಡಿದರು.

ಕೆಪಿಸಿಸಿ ಉಪಾಧ್ಯಕ್ಷ ಸೈಯದ್ ಜಿಯಾವುಲ್ಲಾ ಸೇರಿದಂತೆ ಹಲವಾರು ಗಣ್ಯರು, ಧರ್ಮಗುರುಗಳು

**ಮಾದರಿಯಾಗಿ ಬದುಕಿ – ಯು.ಟಿ.ಖಾದರ್**

ವಧು-ವರರು ದಾಂಪತ್ಯ ಜೀವನವನ್ನು ಉತ್ತಮವಾಗಿ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಆ ಮೂಲಕ ಈ ಕಾರ್ಯಕ್ರಮದ ಉದ್ದೇಶವನ್ನು ಸಾರ್ಥಕ ಪಡಿಸಬೇಕು.

### ಸಾಮೂಹಿಕ ವಿವಾಹ, ಶಾಸಕ ಇಕ್ಬಾಲ್‌ಗೆ ರಹೀಂ ಖಾನ್ ಪ್ರಶಂಸೆ

**ಪೌರಾಡಳಿತ ಸಚಿವ ರಹೀಂ ಖಾನ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈಗ ವಿವಾಹಗಳು ದುಬಾರಿಯಾಗುತ್ತಿದ್ದು, ಒಂದು ಮದುವೆ ಮಾಡುವುದೂ ಕಷ್ಟವಾಗಿದೆ. ಹೀಗಿರುವಾಗ ಶಾಸಕ ಇಕ್ಬಾಲ್ ಹುಸೇನ್ ರವರು ಅದ್ದೂರಿಯಾಗಿ ಸರಳ ಸಾಮೂಹಿಕ ವಿವಾಹ ನೆರವೇರಿಸಿರುವುದು ಅಭಿನಂದನೀಯ ಎಂದು ಶ್ಲಾಘಿಸಿದರು.**

ಮೊದಲ ಪುಟದಿಂದ

### ಮೊಳಗಿದ ಸಾಮೂಹಿಕ ಹನುಮಾನ್ ಸ್ಮರಣೆ

ಅಚ್ಚುಕಟ್ಟಾದ ವಾದ್ಯ ಪರಿಕರಗಳ ಹಿಮ್ಮೇಳದೊಂದಿಗೆ ಒಟ್ಟು 18 ಬಾರಿ ಹನುಮಾನ್ ಚಾಲೀಸಾ ಪಠಣ ಮಾಡಿದರು. ರಾಷ್ಟ್ರಗೀತೆಯನ್ನು ಹಾಡುವುದರೊಂದಿಗೆ ಮಹಾಯಜ್ಞ ಸಂಪನ್ನಗೊಂಡಿತು. ಪಾರಾಯಣ ಮಹಾಯಜ್ಞದಲ್ಲಿ ಪಾಲ್ಗೊಂಡಿದ್ದ ಭಕ್ತರಿಗೆ ಕುಳಿತ ಸ್ಥಳಕ್ಕೇ ಅನ್ನ ಪ್ರಸಾದ ವಿತರಣೆ ಮಾಡಲಾಯಿತು. ಸ್ವಯಂ ಸೇವಕರಿಂದ ಪ್ರಸಾದ ಹಾಗೂ ಕುಡಿಯುವ ನೀರು ಹಂಚಿದರು.

### ಕೊರಿಯನ್ ಗೇಮ್ ಗೀಳಿಗೆ ಯುವಕ ಬಲಿ

ಕೊರಿಯನ್ ಗೆಮ್ಸ್ ಆಡುತಿದ್ದ. ನನ್ನ ಸಾವಿಗೆ ನಾನೇ ಕಾರಣ ಎಂದು ಮೆಸೇಜ್ ಮಾಡಿ ಸಾವಿಗೀಡಾಗಿದ್ದ.

### ಬಂಧಿತ ಶಾಸಕ ಬೈರತಿ ಬಸವರಾಜ್ ಆಂಜಿಯೋಗ್ರಾಂ

ಯಾರಿಗೂ ಪ್ರವೇಶವಿಲ್ಲ. ಸಿಐಡಿಯ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಒಂದು ಟೀಂ ನಿಗಾವಹಿಸಿದೆ. ತಿಲಕ್ ನಗರ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಈಗಾಗಲೇ ಬ್ಲಡ್ ಸ್ಯಾಂಪಲ್ ಪಡೆಯಲಾಗಿದೆ. ಆಂಜಿಯೋಗ್ರಾಂ ವರದಿ ಬಂದ ಬಳಿಕ ನ್ಯಾಯಧೀಶರ ಮುಂದೆ ಹಾಜರುಪಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ನಮ್ಮದು ನುಡಿದಂತೆ ನಡೆದ ಸರ್ಕಾರ

ನಾವು 592 ಭರವಸೆಗಳನ್ನು ನೀಡಿದ್ದೇವೆ. ಅವುಗಳಲ್ಲಿ 240 ಈಡೇರಿಸಿದ್ದೇವೆ. ಉಳಿದ ಭರವಸೆಗಳನ್ನು ಸಹ ನಾವು ಈಡೇರಿಸುತ್ತೇವೆ. ನಮ್ಮ ವಿರುದ್ಧದ ಬಿಜೆಪಿಯ ಎಲ್ಲಾ ಆರೋ ಪಗಳು ಸುಳ್ಳು ಎಂದು ಸಿಎಂ ಹೇಳಿದರು. ನಾಯಕತ್ವದ ಕುರಿತು ಪದೇ ಪದೇ ಕೇಳಲಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಹೈಕಮಾಂಡ್ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಅದೇ ಪ್ರಶ್ನೆಯನ್ನು ಪುನರಾವರ್ತಿಸುವ ಅಗತ್ಯವಿಲ್ಲ. ಹೈಕಮಾಂಡ್ ಹೇಳುವುದನ್ನು ನಾವು ಕೇಳಬೇಕು. ನಮ್ಮ ಎಲ್ಲಾ ಪಕ್ಷದ ನಾಯಕರು ಹೈಕಮಾಂಡ್ ನಿರ್ದೇಶನಗಳನ್ನು ಪಾಲಿಸಬೇಕು ಎಂದು ಅವರು ತಿಳಿಸಿದರು.

### ಕೋಟ್ಯಂತರ ಬೆಲೆ ಬಾಳುವ ಕೆರೆ ಜಾಗ ಅತಿಕ್ರಮಣ ತೆರವು

ಕಬಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಸೂಕ್ಷ್ಮ ಪರಿಸರ ವಲಯಕ್ಕೆ ಅನತಿ ದೂರದಲ್ಲಿರುವ ಸರ್ಕಾರಿ ಜಾಗ ಅದರಲ್ಲಿ ಕೆರೆ ಇರುವ ಜಾಗ ಹಾಗಾಗಿ ಈ ಜಾಗವನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಲಾಗುವುದಿಲ್ಲ ನಾವು ಹೋರಾಟ ಮಾಡುತ್ತೇವೆ ಎಂದು ಅಕ್ರಮ ಕಾಂಪೌಂಡ್ ನಿರ್ಮಾಣ ಮಾಡಿರುವುದನ್ನ ಕೂಡಲೇ ತೆರವು ಮಾಡಬೇಕು ಎಂದು ಆಗ್ರಹಿಸಿದ್ದರು.

### ಪಂಚರ್ ಆದ ಸಿದ್ದು ಪಂಚ ಗ್ಯಾರಂಟಿ

ಓಲೈಕೆ ಮೂಲಕ ಹಿಂದೂಗಳಿಗೆ ಅನ್ಯಾಯ ಮಾಡ್ತಿದೆ. ಅಭಿವೃದ್ಧಿ ದೂರದೃಷ್ಟಿ ಇಲ್ಲದೇ 25 ವರ್ಷ ಕೆಳಗೆ ರಾಜ್ಯ ಹೋಗಿದೆ ಎಂದಿದ್ದಾರೆ.

ಕಾಂಗ್ರೆಸ್‌ನವರು ವೈಫಲ್ಯ, ಭ್ರಷ್ಟಾಚಾರ ಮುಚ್ಚಿ ಹಾಕಲು ಕೇಂದ್ರದ ಮೇಲೆ ಆರೋಪ ಮಾಡುತ್ತಿದ್ದಾರೆ. ಈ ಸರ್ಕಾರ ಎಲ್ಲ ವರ್ಗದ ಜನರಿಗೆ ಘೋರ ಅನ್ಯಾಯ ಮಾಡಿದೆ. ಇಲಾಖೆಗಳಿಗೆ ಕೇಂದ್ರದ ವಿಶೇಷ ಅನುದಾನ ಕೊಟ್ಟೇ ಇಲ್ಲ. ಅನುದಾನ ಕೊಡದಿದ್ದರೂ ಇಲಾಖೆಗಳ ಮೇಲೆ ಒತ್ತಾಯ ಹಾಕಿ ನಕಲಿ ಯುಟಿಲೈಸೇಷನ್ ಸರ್ಟಿಫಿಕೇಟ್ ಸಲ್ಲಿಕೆ ಮಾಡಲಾಗಿದೆ ಎಂದು ಆರೋಪಿಸಿದರು.

### ಯತ್ನಾಳ್ ಗೆಲುವಿಗೆ ಸುಪ್ರೀಂನಲ್ಲೂ ಮನ್ನಣೆ

ಹೈಕೋರ್ಟ್ ಮೊರೆ ಹೋಗಿದ್ದರು. 2025ರ ಜುಲೈ 18ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಹಮೀದ್ ಮುಶ್ರೀಫ್ ಅವರ ಅರ್ಜಿಯನ್ನು ವಜಾ ಮಾಡಿತ್ತು. ಅಷ್ಟೇ ಅಲ್ಲದೆ, ಅರ್ಜಿದಾರರಿಗೆ ದಂಡವನ್ನೂ ವಿಧಿಸಿತ್ತು. ಸುಪ್ರೀಂ ಕೋರ್ಟ್ ಸಹ ದಂಡ ವಿಧಿಸಿರುವುದನ್ನು ಎತ್ತಿ ಹಿಡಿದಿದೆ.

# ಕೆಂಗಲ್ ಈ ನೆಲದ ಸ್ವಾಭಿಮಾನಿ ರಾಜಕಾರಣಿ

## ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿಕೆ | ಕೆಂಗಲ್ ಹನುಮಂತಯ್ಯ ಪುತ್ಥಳಿಗೆ ಮಾಲಾರ್ಪಣೆ

ರಾಮನಗರ: ನಮ್ಮ ನೆಲದ ಸ್ವಾಭಿಮಾನಿ ರಾಜಕರಣಿ ಕೆಂಗಲ್ ಹನುಮಂತಯ್ಯ. ಅವರ ವಿಚಾರಗಳನ್ನು ಇಂದಿನ ಪೀಳಿಗೆಗೆ ತಿಳಿಸಿ ಕೊಡಬೇಕಾಗಿದೆ. ಹೀಗಾಗಿ ನಗರಸಭೆವತಿಯಿಂದ ವಿಚಾರ ಸಂಕಿರ್ಣವನ್ನು ಆಯೋಜಿಸುವುದಾಗಿ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹುನಂತಯ್ಯ ಅವರ ಜಯಂತಿ ಅಂಗವಾಗಿ ನಗರದ ಹಳೇ ಬಸ್‌ನಿಲ್ದಾಣದ ಬಳಿ ಇರುವ ವೃತ್ತದಲ್ಲಿ ಕೆಂಗಲ್ ಹನುಮಂತಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಕೆಂಗಲ್ ಹನುಮಂತಯ್ಯ ಅವರ ಆಡಳಿತಾವಧಿಯಲ್ಲಿ ವಿಧಾನಸೌಧ ನಿರ್ಮಿಸಲಾಗಿದೆ. ಅವರೊಬ್ಬ ದಕ್ಷ ಆಡಳಿತಗಾರ ದೂರದೃಷ್ಟಿತ್ವವನ್ನು ಹೊಂದಿದ್ದರು. ಅವರ ತತ್ವ-ಆದರ್ಶಗಳನ್ನು ನಾಗರೀಕರಿಗೆ ವಿಶೇಷವಾಗಿ ಮುಂದಿನ ಪೀಳಿಗೆಗೆ ತಿಳಿಸಕೊಡಬೇಕಾದ ಅವಶ್ಯಕತೆ ಇದೆ. ಹೀಗಾಗಿ ವಿಚಾರ ಸಂಕಿರ್ಣವನ್ನು ಆಯೋಜಿಸಲಾಗುವುದು ಎಂದರು. ಕೆಂಗಲ್ ಪ್ರತಿಮೆ ಸಂರಕ್ಷಣೆ ದೃಷ್ಟಿ ಯಿಂದ ಮಂಟಪಕ್ಕೆ ಯಾವುದೇ ಬ್ಯಾನರ್, ಕಟೌಟ್‌ಗಳನ್ನು ಅಳವಡಿಸದಂತೆ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ರಮೇಶ್, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮಗುರುವೇಗೌಡ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಶಿವಲಿಂಗಪ್ಪ, ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಲಿಂಗು, ಭಾರತಿ ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಚಂದ್ರಯ್ಯ, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್, ನಗರಸಭೆ ಸದಸ್ಯರಾದ ಸೋಮಶೇಖರ್, ಬಿ.ಸಿ.ಪಾರ್ವತಮ್ಮ, ಮಂಜುಳಾ, ಮಹಾಲಕ್ಷ್ಮಿ, ಮಂಜುನಾಥ್, ಗ್ಯಾಬ್ರಿಯಲ್, ವಿಜಯಕುಮಾರಿ, ನಾಗಮ್ಮ, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿಸುರೇಶ್, ಪ್ರಾಧಿಕಾರದ ನಿರ್ದೇಶಕ ಪ್ರವೀಣ್, ಕೆಡಿಪಿ ಸದಸ್ಯ ಪುಟ್ಟಣ್ಣ, ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಿವಕುಮಾರಸ್ವಾಮಿ, ಮುಖಂಡರುಗಳಾದ ಗುರುಪ್ರಸಾದ್, ಚೂಡಲಿಂಗಯ್ಯ, ಮಾಯಗಾನಹಳ್ಳಿ ರೇವಣ್ಣ, ಡೈರಿವೆಂಕಟೇಶ್, ನಾಗೋಹಳ್ಳಿದೀಪು, ದೇವರಾಜು, ಪ್ರಕಾಶ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕೆಂಗಲ್ ಹನುಮಂತಯ್ಯ ಸಮಿತಿ ಸದಸ್ಯರು ಭಾಗವಹಿಸಿದ್ದರು.



### ಸಮಾಧಿ ಸ್ಥಳ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

**ರಾಮನಗರ-ಚನ್ನಪಟ್ಟಣ ತಾಲ್ಲೂಕು ಗಡಿ ಭಾಗದಲ್ಲಿರುವ ಕೆಂಗಲ್‌ನಲ್ಲಿರುವ ಕೆಂಗಲ್ ಹನುಮಂತಯ್ಯ ಅವರ ಸಮಾಧಿ ಸ್ಥಳ ಅಭಿವೃದ್ಧಿಯಾಗಬೇಕಾಗಿದೆ. ತಾವು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗರೆಡ್ಡಿ, ಶಾಸಕ ಸಿ.ಪಿ.ಯೋಗೇಶ್ವರ್ ಸೇರಿದಂತೆ ಜಿಲ್ಲಾಧಿಕಾರಿಗಳ ಗಮನ ಸೆಳೆದು ಸಮಾಧಿ ಸ್ಥಳವನ್ನು ಅಭಿವೃದ್ಧಿ ಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.**

### ಪೌರ ಕಾರ್ಮಿಕರಿಗೆ ತಲಾ 5 ಲಕ್ಷ ರೂ ಮೌಲ್ಯದ ಆರೋಗ್ಯ ಕಾರ್ಡ್ ವಿತರಣೆ

ರಾಮನಗರ: ಕೆಂಗಲ್ ಹನುಮಂತಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ ನಂತರ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಗರಸಭೆವತಿಯಿಂದ ಪೌರಕಾರ್ಮಿಕರಿಗೆ ಆರೋಗ್ಯ ಕಾಡ್ ವಿತರಣಾ ಸಮಾರಂಭ ನಡೆಯಿತು. ನಗರಸಭೆಯ ಶೇ 24.10 ಕಾರ್ಯಕ್ರಮದಡಿ 157 ಪೌರ ನೌಕರರಿಗೆ ಆರೋಗ್ಯ ಕಾರ್ಡ್‌ಗಳನ್ನು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ವಿತಿರಿಸಿದರು.

ಈ ವೇಳೆ ಆರೋಗ್ಯ ಶಾಖೆಯ ಎಇಇ ಸುಬ್ರಮಣಿ ಮಾತನಾಡಿ ಪ್ರತಿನಿತ್ಯ ನಗದ ಸ್ವಚ್ಚತೆ ಸೇರಿದಂತೆ ಅನೈರ್ಮಲ್ಯ ಕೆಲಸವನ್ನು ಮಾಡುವ ಪೌರಕಾರ್ಮಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಗಳು ಹೆಚ್ಚು. ಇಂತಹ ಸಂದರ್ಭಗಳಲ್ಲಿ ಅವರಿಗೆ ಚಿಕಿತ್ಸೆ ದೊರಕಿಸಿಕೊಡುವ ಉದ್ದೇಶದಲ್ಲಿ ತಲಾ 5 ಲಕ್ಷ ರೂ ಮೊತ್ತದ ಆರೋಗ್ಯ ಕಾರ್ಡುಗಳನ್ನು ವಿತರಿಸಲಾಗುತ್ತಿದೆ ಎಂದರು.

ಬೆಂಗಳೂರು ದಕ್ಷಿಣ (ರಾಮನಗರ), ಮಂಡ್ಯ ಜಿಲ್ಲೆಗಳು ಹಾಗೂ ಬೆಂಗಳೂರು ನಗರದಲ್ಲಿರುವ ಕೆಲವು ಆಯ್ದ ಆಸ್ಪತ್ರೆಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಪೌರ ನೌಕರರು ಪಡೆಯಬಹುದಾಗಿದೆ ಎಂದರು.

ಈ ವೇಳೆ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮಗುರುವೇಗೌಡ ಪೌರ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ ಆರ್.ನಾಗರಾಜು, ಜಿಲ್ಲಾಧ್ಯಕ್ಷ ಕೊಲ್ಲಾಪುರಿ ಮತ್ತಿತರರು ಇದ್ದರು. ಪೌರಕಾರ್ಮಿಕ ಶಂಕರ ಅವರ ನಿಧನ ಹಿನ್ನೆಲೆಯಲ್ಲಿ ಒಂದು ನಿಮಿಷದ ಮೌನ ಆಚರಿಸಿ ಶ್ರದ್ಧಾಂಜಿ ಅರ್ಪಿಸಲಾಯಿತು.



ಮೊದಲ ಪುಟದಿಂದ

### ರಾಜ್ಯ ಸರ್ಕಾರ ತೆಗೆಯೋದು ಅಜೆಂಡಾ

ಅಂತ ಇವತ್ತು ಸಭೆಯಲ್ಲಿ ಚರ್ಚೆ ಮಾಡ್ತೀವಿ. ಮೈತ್ರಿ ವಿಷಯದ ಬಗ್ಗೆ ಈ ಕ್ಷಣದವರೆಗೆ ನಾವೇನು ಚರ್ಚೆ ಮಾಡಿಲ್ಲ ಎಂದು ತಿಳಿಸಿದರು.

ಜೆಡಿಎಸ್ ಜೊತೆ ಮೈತ್ರಿಗೆ ಮಂಡ್ಯ, ಹಾಸನದಲ್ಲಿ ಬಿಜೆಪಿ ನಾಯಕರ ವಿರೋಧ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ವ್ಯಕ್ತಿಗಳ ಹೇಳಿಕೆ ಬಗ್ಗೆ ನಾನು ಚರ್ಚೆ ಮಾಡಲು ಹೋಗೊಲ್ಲ. ಒಂದೊಂದು ಪಕ್ಷದಲ್ಲಿ ಒಂದೊಂದು ರೀತಿ ಚರ್ಚೆ ಮಾಡ್ತಾರೆ. ವಿಧಾನಸಭೆ ಚುನಾವಣೆಗೆ ಎರಡು ವರ್ಷ ಇದೆ. ಸ್ಥಳೀಯ ಸಂಸ್ಥೆ ಚುನಾವಣೆಗೆ 4-5 ತಿಂಗಳು ಇದೆ. ಆ ಸಮಯ ಬಂದಾಗ ಚರ್ಚೆ ಮಾಡೋಣ. ವೈಯಕ್ತಿಕವಾಗಿ ಮಾತಾಡೋರಿಗೆ ನಾನು ಉತ್ತರ ಕೊಡೋದು ಅನಾವಶ್ಯಕ ಎಂದು ಮಾಜಿ ಶಾಸಕ ಪ್ರೀತಂಗೌಡ, ನಾರಾಯಣಗೌಡ ಹೇಳಿಕೆಗೆ ಕುಮಾರಸ್ವಾಮಿ ತಿರುಗೇಟು ನೀಡಿದರು.

### ಪೆಟ್ರೋಲ್ ಬಂಕ್‌ಗೆ ನುಗ್ಗಿ ದರೋಡೆ

ಸೆರೆಯಾಗಿದೆ. ಆರೋಪಿಗಳು ಕ್ಯಾಷಿಯರ್ ಜೊತೆ ಜಗಳವಾಡುತ್ತಿರುವ ದೃಶ್ಯಗಳು ಸೆರೆಯಾಗಿವೆ. ಈ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

ನಂಬರ್ ಪ್ಲೇಟ್ ಇಲ್ಲದ ಕಾರಿನಲ್ಲಿ ಬಂದು ಮೊದಲು ಪೆಟ್ರೋಲ್ ಹಾಕಿಸುತ್ತಿದ್ದ ಗ್ಯಾಂಗ್, ನಂತರ ಕಚೇರಿ ಒಳಗೆ ನುಗ್ಗಿ ಸಿಬ್ಬಂದಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಹಣ ಕಸಿದುಕೊಂಡು ಹೋಗಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿರುವ ಕ್ಯಾಷಿಯರ್ ಅಜಯ್ ಕುಮಾರ್ ಮತ್ತು ಸಿಬ್ಬಂದಿ ದಿನೇಶ್ ಹಲ್ಲೆಗೆ ಒಳಗಾಗಿದ್ದಾರೆ.

ಬಂಕ್ ಮುಚ್ಚಿದ ನಂತರ ರಾತ್ರಿ ವೇಳೆ ವ್ಯಕ್ತಿಯೊಬ್ಬ ಪೆಟ್ರೋಲ್ ಕೇಳಿದ್ದಾನೆ. ಮೊದಲೇ ತುಂಬಿಟ್ಟಿದ್ದ ಐದು ಲೀಟರ್ ಡೀಸೆಲ್ ಕ್ಯಾನ್‌ಗಳು ಲಭ್ಯವಿದೆ ಎಂದು ಅಜಯ್ ಕುಮಾರ್ ಅವರಿಗೆ ತಿಳಿಸಿದ್ದಾರೆ. ಆ ವ್ಯಕ್ತಿ ಬಂಕ್‌ನ ಪೇಟಿಎಂ ಸ್ಕ್ಯಾನರ್‌ನ ಫೋಟೊ ತೆಗೆದುಕೊಂಡು, ತನ್ನ ಸ್ನೇಹಿತರು ಹಣವನ್ನು ವರ್ಗಾಯಿಸುತ್ತಾರೆ. ಡೀಸೆಲ್ ತೆಗೆದುಕೊಳ್ಳಲು ಬರುತ್ತೇನೆ ಎಂದು ಹೇಳಿ ಹೊರಟು ಹೋಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬಳಿಕ ಅದೇ ವ್ಯಕ್ತಿ ಇತರ ನಾಲ್ವರೊಂದಿಗೆ ಕಾರಿನಲ್ಲಿ ಬಂದು ಡೀಸೆಲ್ ಕೇಳುತ್ತಿರುವಂತೆ ನಟಿಸಿದ್ದಾನೆ. ರಾತ್ರಿ ಐವರೂ ಸೇರಿ ಡ್ಯಾಗರ್ ಮತ್ತು ಮಚ್ಚು ಹಿಡಿದು ಕಚೇರಿಗೆ ನುಗ್ಗಿ, ಕ್ಯಾಷಿಯರ್ ಮತ್ತು ಇನ್ನೊಬ್ಬ ಸಿಬ್ಬಂದಿ ದಿನೇಶ್ ಮೇಲೆ ಹಲ್ಲೆ ನಡೆಸಿದ್ದಾರೆ. ಹಣಕ್ಕಾಗಿ ಬೇಡಿಕೆ ಇಟ್ಟರು. ಗಲಾಟೆ ಸಮಯದಲ್ಲಿ, ಆರೋಪಿಗಳಲ್ಲಿ ಒಬ್ಬ ಕ್ಯಾಷಿಯರ್ ಜೇಬಿನಿಂದ ಬಲವಂತವಾಗಿ 15,300 ಗಳನ್ನು ಕಸಿದುಕೊಂಡಿದ್ದಾರೆ.

ಕ್ಯಾಷಿಯರ್ ಎಡ ಭುಜ ಮತ್ತು ಬೆನ್ನಿಗೆ ಗಾಯಗಳಾಗಿದ್ದರೆ, ದಿನೇಶ್ ಹಣೆ ಮತ್ತು ಬಲ ಕಿವಿಗೆ ಗಾಯಗಳಾಗಿವೆ. ನಂತರ, ಇಬ್ಬರೂ ಹತ್ತಿರದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿದ್ದಾಗಿ ತಿಳಿಸಿದ್ದಾರೆ.

ಆರೋಪಿಗಳು ಕಚೇರಿಯಲ್ಲಿ ಒಂದು ಮಚ್ಚನ್ನು ಬಿಟ್ಟು, ತರಾತುರಿಯಲ್ಲಿ ಕಾರಿನಲ್ಲಿ ಪರಾರಿಯಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಬಿಳಿಕೆರೆ ಠಾಣೆ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 310 (2) (ದರೋಡೆ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲು ಶೋಧ ನಡೆಸಿದ್ದಾರೆ.

### ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 141 ಸ್ಥಾನ: ಡಿಕೆಶಿ

ಸೀಟುಗಳು ಬಂದಿದ್ದವು. ಮುಂದಿನ ಚುನಾವಣೆಯಲ್ಲಿ ನಮಗೆ 141 ಸೀಟುಗಳು ಬರಲಿವೆ. ನನ್ನ ಈ ಮಾತನ್ನು ಬರೆದಿಟ್ಟುಕೊಳ್ಳಿ. ನನಗೆ ನಮ್ಮ ಶಾಸಕರಿಗೆ ಆತ್ಮವಿಶ್ವಾಸವಿದೆ ಎಂದು ಡಿಕೆಶಿ ಹೇಳಿದರು.

3 ಕ್ಷೇತ್ರಗಳ ಉಪಚುನಾವಣೆಗಳಲ್ಲಿ ಎರಡು ಕಡೆ ಮಾಜಿ ಮುಖ್ಯಮಂತ್ರಿಗಳ ಪುತ್ರರು ಸ್ಪರ್ಧೆ ಮಾಡಿದ್ದರು. ಆ ಕ್ಷೇತ್ರಗಳು ನಮ್ಮ ಬಳಿ ಇರಲಿಲ್ಲ. ಆ ಕ್ಷೇತ್ರಗಳನ್ನು ಜನರು ಮತ್ತೆ ಕಾಂಗ್ರೆಸ್‌ಗೆ ನೀಡಿ ನಮ್ಮ ಸಂಖ್ಯಾಬಲವನ್ನು 139ಕ್ಕೆ ಏರಿಕೆ ಮಾಡಿದ್ದೀರಿ. ನಿಮಗೆಲ್ಲರಿಗೂ ಧನ್ಯವಾದ. ನಿಮ್ಮ ಈ ಋಣ ತೀರಿಸಲು ಈ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದು ಹೇಳಿದರು.

### ಮಾದಕ ವಸ್ತು ವಶ: ಆರೋಪಿ ಬಂಧನ

ಎಂಡಿಎಂಎ ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ಆರೋಪಿ ಎ೧. ಮೊಹಮ್ಮದ್ ಕರೀಂ, ಎ2. ನಿಷಾದ್ ಪಾಷ ಬಂಧಿಸಿದ್ದರು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಉಳಿದ ಆರೋಪಿಗಳ ದಸ್ತಗಿರಿಗೆ ಕ್ರಮ ಕೈಗೊಂಡು ಕಾರ್ಯಾಚರಣೆ ಮುಂದುವರೆಸಿದ್ದರು. ಈಗ 2ನೇ ಆರೋಪಿ ನಿಷಾದ್ ಪಾಷ ಎಂಬಾತನಿಗೆ ಮಾದಕ ವಸ್ತು ಎಂ.ಡಿ.ಎಂ.ಎ ಮಾರಾಟ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಮೊಹಮ್ಮದ್ ರೋಷನ್ ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತನಿಂದ 4 ಲಕ್ಷ ರೂ ಮೌಲ್ಯದ 41.31 ಗ್ರಾಂ ಎಂ.ಡಿ.ಎಂ.ಎ ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಕಾರ್ಯಾಚರಣೆಯಲ್ಲಿ ಮಂಡಿ ಪೊಲೀಸ್ ಠಾಣಾ ಇನ್ಸ್ ಪೆಕ್ಟರ್ ಆರ್.ದಿವಾಕರ್, ಪಿ.ಎಸ್.ಐ ರಾಜು ಕೋನಕೇರಿ ಭಾಗವಹಿಸಿದ್ದರು.

### ಶಿವರಾತ್ರಿ ಆಚರಣೆಗೆ ಸಿದ್ಧತೆ

ಗುರುಕುಲದಲ್ಲಿರುವ ನೂರೊಂದು ಶಿವಲಿಂಗಗಳನ್ನು ಸ್ವಚ್ಛಗೊಳಿಸಿ ಪೂಜೆಗೆ ಸಜ್ಜು ಮಾಡಲಾಯಿತು. ಇದರ ಮುಂಭಾಗದಲ್ಲಿರುವ ಕಾಮೇಶ್ವರ, ಕಾಮೇಶ್ವರಿ, ಕೆ.ಜಿ.ಕೊಪ್ಪಲು, ಪಡುವಾರಹಳ್ಳಿಯಲ್ಲಿರುವ ಚಂದ್ರಮೌಳೇಶ್ವರ, ಚಾಮುಂಡಿ ಬೆಟ್ಟದ ಮಹಾಬಲೇಶ್ವರಸ್ವಾಮಿ ದೇಗುಲದಲ್ಲೂ ಶಿವರಾತ್ರಿಯ ಆಚರಣೆ ಸಿದ್ಧತೆ ನಡೆದಿದೆ. ಜಯಲಕ್ಷ್ಮೀಪುರಂನ ಕಾಳಿದಾಸ ರಸ್ತೆಯ ಚಂದ್ರಕಲಾ ಆಸ್ಪತ್ರೆ ಸಮೀಪ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯವು ಶಿವರಾತ್ರಿ ಪ್ರಯುಕ್ತ ಅಡಿ ಎತ್ತರ ಶಿವಲಿಂಗ ಸ್ಥಾಪಿಸಿದೆ. ಚಾಮರಾಜಪುರಂನ ಗೀತಾ ರಸ್ತೆಯಲ್ಲಿನ ಪ್ರಸನ್ನ ವಿಶ್ವೇಶ್ವರ ಸ್ವಾಮಿ, ಖಿಲ್ಲೆ ಮೊಹಲ್ಲಾದ ಭೈರವೇಶ್ವರಸ್ವಾಮಿ, ಅಶೋಕ ರಸ್ತೆಯ ಮುಕ್ಕಣೇಶ್ವರ ಸ್ವಾಮಿ, ದಿವಾನ್ಸ್ ರಸ್ತೆಯ ಅಮೃತೇಶ್ವರ ದೇವಸ್ಥಾನ, ಬೋಗಾದಿಯ ನಾಗೇಶ್ವರ ಭೋಗೇಶ್ವರಸ್ವಾಮಿ, ಕುಂಬಾರಕೊಪ್ಪಲು, ಸಿದ್ದಪ್ಪ ಚೌಕ, ನಕೇರಿ, ಬನ್ನೂರು ರಸ್ತೆ, ಲಷ್ಕರ್ ಮೊಹಲ್ಲಾದ ಕೇರಿ ಹಾಗೂ ಇತರೆಡೆ ಇರುವ ಮಹದೇಶ್ವರ ದೇವಾಲಯ, ಸುತ್ತೂರು ಮಠ, ಗಣಪತಿ ಸಚ್ಚಿದಾನಂದ ಆಶ್ರಮದಲ್ಲೂ ಆಚರಣೆ ನಡೆಯಲಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

**ಬಸವನಹಳ್ಳಿ ಬಿ.ಆರ್.ಮಂಜುನಾಥ್**

# ಡಿಎಸ್‌ಎಸ್ ತಾಲ್ಲೂಕು ಸಂಚಾಲಕರ ಅವಿರೋಧ ಆಯ್ಕೆ

ಕೆ.ಆರ್.ಪೇಟೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಪ್ರೊ.ಬಿ.ಕೃಷ್ಣಪ್ಪ ಬಣದ ತಾಲ್ಲೂಕು ಸಂಚಾಲಕರಾಗಿ ಬಸವನಹಳ್ಳಿ ಬಿ.ಆರ್.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ (ಪ್ರೊ.ಕೃಷ್ಣಪ್ಪ ಸ್ಥಾಪಿತ) ಕರ್ನಾಟಕ ದಲಿತ ಸಂಘರ್ಷ ಸಮಿತಿ(ರಿ) ಮಂಡ್ಯ ಜಿಲ್ಲಾ ಸಂಚಾಲಕರಾದ ಶಿವರಾಜು ಮರಳಿಗ ಅವರ ಅಧ್ಯಕ್ಷತೆಯಲ್ಲಿ ನಡೆದ ತಾಲ್ಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಸಮಿತಿ ಸಭೆಯಲ್ಲಿ ಕೆ.ಆರ್.ಪೇಟೆ ತಾಲ್ಲೂಕು ಘಟಕಕ್ಕೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಜಿಲ್ಲಾ ಸಂಘಟನಾ ಸಂಚಾಲಕರಾಗಿ ಬಿ.ಎಸ್.ರಾಜು, ತಾಲ್ಲೂಕು ಸಂಘಟನಾ ಸಂಚಾಲಕರಾಗಿ ಬಿ.ಜೆ.ಮಂಜು, ಐಪನಹಳ್ಳಿ ರವೀಶ್, ಬಿ.ಎಸ್.ಚೇತನ್, ಸಾಕ್ಷಿಬೀಡು ಪ್ರಸನ್ನ, ಸಿಂಗನಹಳ್ಳಿ ಮುತ್ತುರಾಜು, ಬಸವನಹಳ್ಳಿ ಬಿ.ಲವ, ಹೆಚ್.ಎನ್.ಶೃತಿ, ಬಿ.ಎಸ್.ರೂಪಾ ಅವರುಗಳು ಆಯ್ಕೆಯಾಗಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ನಿಡಘಟ್ಟ ವೆಂಕಟೇಶ್, ಆರ್.ಸ್ವಾಮಿ, ಬಿ.ಎಂ.ಕೃಷ್ಣಯ್ಯ, ಬಿ.ಕೆ.ರಾಜು, ಕೆ.ಆರ್.ಪೇಟೆ ಸವಿತಾ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಜಿಲ್ಲಾ ಸಂಚಾಲಕ ಶಿವರಾಜು ಮರಳಿಗ ಅವರು ರಾಜ್ಯ ಸಮಿತಿಯ ಸೂಚನೆ ಮೇರೆಗೆ ಇಂದು ಕೆ.ಆರ್.ಪೇಟೆ ತಾಲ್ಲೂಕು ಘಟಕದ ಸಂಚಾಲಕರನ್ನಾಗಿ ಬಿ.ಆರ್.ಮಂಜುನಾಥ್ ಅವರನ್ನು ಮತ್ತು ಜಿಲ್ಲಾ ಸಂಘಟನಾ ಸಂಚಾಲಕರಾದ ಬಿ.ಎಸ್.ರಾಜು ಹಾಗೂ ಇತರೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನೂತನ ಪದಾಧಿಕಾರಿಗಳು ತಾಲ್ಲೂಕಿನಲ್ಲಿ ದಲಿತರು, ಹಿಂದುಳಿದ ವರ್ಗದವರು ಹಾಗೂ ಶೋಷಿತ ವರ್ಗಗಳ ಕುಂದು ಕೊರತೆಗಳನ್ನು ಆಲಿಸಬೇಕು. ಸಮಸ್ಯೆಗೆ ಸೂಕ್ತ ಪರಿಹಾರ ರೂಪಿಸಲು ಹೋರಾಟಗಳನ್ನು ಕೈಗೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ದ ಪ್ರತಿಭಟನೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ರೂಪಿಸಲು ಮುಂದಾಗಬೇಕು. ದಲಿತ ಬಂಧುಗಳಿಗೆ ಸಂವಿಧಾನ ಬದ್ದವಾಗಿ ಸಿಗಬೇಕಾದ ಸರ್ಕಾರಿ ಸೌಲಭ್ಯಗಳನ್ನು ಕೊಡಿಸಲು ಸೂಕ್ತ ಕ್ರಮ ವಹಿಸಬೇಕು. ದಲಿತರ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದರೆ ಅಂತಹ ಅಧಿಕಾರಿಗಳ ವಿರುದ್ದ ಹೋರಾಟ ರೂಪಿಸಬೇಕು ಎಂದು ಸಲಹೆ ನೀಡಿದರು.

ನೂತನ ತಾಲ್ಲೂಕು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಬಿ.ಆರ್.ಮಂಜುನಾಥ್ ಮಾತನಾಡಿ ನನಗೆ ವಹಿಸಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಅರ್ಪಣಾ ಭಾವನೆಯಿಂದ ನಿರ್ವಹಣೆ ಮಾಡಿ ತಾಲ್ಲೂಕಿನಲ್ಲಿ ನೊಂದವರಿಗೆ ಧ್ವನಿಯಾಗಿ ಕೆಲಸ ಮಾಡುವ ಮೂಲಕ ತಮ್ಮ ನಂಬಿಕೆಯನ್ನು ಉಳಿಸಿಕೊಳ್ಳುತ್ತೇನೆ ಎಂದು ಭರವಸೆ ನೀಡಿದರು. ಜಿಲ್ಲಾ ಸಂಘಟನಾ ಸಂಚಾಲಕ ಬಿ.ಎಸ್.ರಾಜು ಮಾತನಾಡಿ ನನಗೆ ಸಿಕ್ಕಿರುವ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಣೆ ಮಾಡುತ್ತೇನೆ. ದಲಿತರು ಮತ್ತು ಶೋಷಿತ ವರ್ಗಗಳನ್ನು ಸಂಘಟಿಸಿ ಸಂಘಟನೆಯನ್ನು ಬಲಪಡಿಸಲು ಮುಂದಾಗುತ್ತೇನೆ. ದಲಿತರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಅಂಬೇಡ್ಕರ್ ಅವರ ಆಶಯದಂತೆ ಹೋರಾಟದಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದು ತಿಳಿಸಿದರು.

# ಸಮಾಜದ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ



ಮೈಸೂರು: ಮೈಸೂರು ಕನ್ನಡ ವೇದಿಕೆಯಿಂದ ಸಮಾಜ ಸೇವಕಿ ಪಾರ್ವತಮ್ಮ, ಸಹ ಶಿಕ್ಷಕಿ ಎಲ್.ಕೆ. ರೂಪಾ ಪ್ರಮೋದ್, ಪೌರಕಾರ್ಮಿಕ ಮಹಿಳೆ ಮಂಜುಳಾಗೆ 'ಸಾವಿತ್ರಿಬಾಯಿ ಫುಲೆ ಪ್ರಶಸ್ತಿ', ಪತ್ರಕರ್ತ ಎಂ.ಮಹೇಶ್ ಭಗೀರಥ, ಜ್ಯೋತಿಷಿ ಕೆ.ಎನ್. ಸುಬ್ರಹ್ಮಣ್ಯ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ ಸಾಯಿ ಚಾಮರಾಜ ಹಾಗೂ ಉದ್ಯಮಿ ನಂದಕುಮಾರ್ ಗೆ ಸ್ವಾಮಿ ವಿವೇಕಾನಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆಯು ಶನಿವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಹಾಗೂ ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ಸ್ವಾಮಿ ವಿವೇಕಾನಂದರ ಚಿಂತನೆಗಳು ಇಂದಿಗೂ ಶಿಕ್ಷಣ, ಸೇವೆ ಮತ್ತು ಸ್ವಾಭಿಮಾನದ ಮೂಲಕ ಸಮಾಜವನ್ನು ಮುನ್ನಡೆಸುವ ಶಕ್ತಿಯಾಗಿವೆ. ಸಾವಿತ್ರಿಬಾಯಿ ಫುಲೆ ಅವರ ಜೀವನವು ಶಿಕ್ಷಣವೇ ಸಾಮಾಜಿಕ ಕ್ರಾಂತಿಯ ಮೂಲ ಎಂಬ ಸಂದೇಶ ನೀಡುತ್ತದೆ. ವಿವೇಕಾನಂದ ಭಾರತೀಯ ಆತ್ಮಚಿಂತನೆಯ ಜಾಗತಿಕ ರಾಯಭಾರಿ, ಯುವಶಕ್ತಿಗೆ ದಾರಿ ತೋರಿದ ಗುರು ಹಾಗೂ ರಾಷ್ಟ್ರ ನಿರ್ಮಾಣಕ್ಕೆ ಆಧ್ಯಾತ್ಮಿಕ ನೆಲೆ ನೀಡಿದ ಚಿಂತಕ. ಭಾರತ ದೇಶ ಹಾಗೂ ಹಿಂದೂ ಧರ್ಮದ ತಾಕತ್ತನ್ನು ಇಡೀ ವಿಶ್ವಕ್ಕೆ ಸಾರಿದವರು. ಯುವಕರಿಗೆ ಸ್ಫೂರ್ತಿದಾತರು. ಅವರು ಕಟ್ಟಿದ ರಾಮಕೃಷ್ಣ ಆಶ್ರಮ ದೇಶದ ಉನ್ನತಿಗೆ ಕೆಲಸ ಮಾಡುತ್ತಿದೆ. ಭಾರತ ವಿಶ್ವಗುರು ಆಗಬೇಕು ಎಂಬುದು ಅವರ ಕನಸಾಗಿತ್ತು' ಎಂದರು.

ಮುಖ್ಯ ಅತಿಥಿಯಾಗಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಘಟಕದ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ ಮಾತನಾಡಿ, ರಾಜ್ಯದ ಯಾವುದೇ ಭಾಗದಲ್ಲಿ ಕನ್ನಡ ನೆಲ, ಜಲ, ಭಾಷೆ, ಗಡಿಯ ವಿಚಾರದಲ್ಲಿ ಧಕ್ಕೆ ಎದುರಾದಾಗ ಮೊದಲಿಗೆ ಧ್ವನಿ ಎತ್ತುವ ಕೆಲಸವನ್ನು ಮೈಸೂರು ಕನ್ನಡ ವೇದಿಕೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಧಾನ ಭಾಷಣ ಮಾಡಿದರು. ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆಯ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ರೈತ ಸಂಘದ ಅಧ್ಯಕ್ಷ ಅರುಣ್‌ಕುಮಾರ್ ಮಾತನಾಡಿದರು. ನಿವೃತ್ತ ಶಿಕ್ಷಕ ಮನೋಹರ್ ಕಾರ್ಯಕ್ರಮ ನಿರೂಪಿಸಿದರು. ಭವಾನಿ ಪ್ರಾರ್ಥಿಸಿದರು.

# ಬಡವಿದ್ಯಾರ್ಥಿಯ ಓದಿಗೆ ಧನಸಹಾಯ




ಚಾಮರಾಜನಗರ: ಕದಳಿ ಮಹಿಳಾ ವೇದಿಕೆ ವತಿಯಿಂದ ರಾಮಸಮುದ್ರ ಬಡಾವಣೆಯ ಬಡವಿದ್ಯಾರ್ಥಿ ಪುನೀತ್ ರಾಜು ಓದಿಗೆ ಧನ ಸಹಾಯ ಮಾಡಲಾಯಿತು.

ನಗರದ ರೋಟರಿ ಭವನದಲ್ಲಿ ನಡೆದ ರೋಟರಿ ಸಂಸ್ಥೆಯ ಸಭೆಯಲ್ಲಿ ವಿದ್ಯಾರ್ಥಿಯ ಪೋಷಕರು ಮಗನ ಓದಿಗೆ ಸಹಾಯ ಮಾಡುವಂತೆ ಮನವಿ ಮಾಡಿಕೊಂಡಿದ್ದರು. ರೋಟರಿ ಸಂಸ್ಥೆಯ ಸಹಕಾರದಲ್ಲಿ ಕದಳಿ ಮಹಿಳಾ ವೇದಿಕೆಯು ವಿದ್ಯಾರ್ಥಿಯ ಓದಿಗೆ ಧನಸಹಾಯ ಮಾಡಿತು.

ಧನ ಸಹಾಯ ಮಾಡಿದ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ವಸಂತಮ್ಮ ನಂಜುಂಡಸ್ವಾಮಿ ಮಾತನಾಡಿ, ನಮ್ಮ ವೇದಿಕೆಯ ವತಿಯಿಂದ ಸಮಾಜಮುಖಿ ಕಾರ್ಯಗಳನ್ನು ಮಾಡಿಕೊಂಡು ಬರಲಾಗಿದ್ದು, ಅದರಂತೆ ವಿದ್ಯಾರ್ಥಿ ಪುನೀತ್ ರಾಜು ಓದಿಗೆ ಧನ ಸಹಾಯ ಮಾಡಲಾಗಿದೆ ಎಂದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಕದಳಿ ಮಹಿಳಾ ವೇದಿಕೆಯು ಸಮಾಜಮುಖಿ ಸೇವಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದ್ದ ಅದೇ ರೀತಿಯಲ್ಲಿ ರೋಟರಿ ಮನವಿ ಸ್ಪಂದಿಸಿ ಬಡವಿದ್ಯಾರ್ಥಿ ಓದಿಗೆ ಸಹಾಯ ಮಾಡಿರುವುದು ತುಂಬಾ ಸಂತಸವಾಗಿದ್ದು ಮುಂದಿನ ದಿನಗಳಲ್ಲೂ ನಮ್ಮ ಸಂಸ್ಥೆ ಗೆ ಇದೇ ರೀತಿ ಸಹಕಾರ ನೀಡಬೇಕು ಎಂದು ಮನವಿ ಮಾಡಿ, ಕದಳಿ ಮಹಿಳಾ ವೇದಿಕೆಯ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕದಳಿ ಮಹಿಳಾ ವೇದಿಕೆಯ ಪದಾಧಿಕಾರಿಗಳು, ರೋಟರಿ ಸಂಸ್ಥೆಯ ಕಾರ್ಯದರ್ಶಿ ಸಿದ್ದರಾಜು, ಖಜಾಂಚಿ ಆರ್.ಎಂ.ಸ್ವಾಮಿ, ಓಡಿಜಿ ಡಾ.ನಾಗರಾಜ ಪದಾಧಿಕಾರಿಗಳು ಹಾಜರಿದ್ದರು.

## ದೇಗುಲ ನಿರ್ಮಾಣದಿಂದ ಆಧ್ಯಾತ್ಮಿಕ ಶಾಂತಿ, ಪರಂಪರೆಯ ಸಂರಕ್ಷಣೆ



ಕೆ.ಆರ್.ಪೇಟೆ ದೇವಾಲಯಗಳ ನಿರ್ಮಾಣದಿಂದ ಆಧ್ಯಾತ್ಮಿಕ ಶಾಂತಿ, ಮಾನಸಿಕ ನೆಮ್ಮದಿ, ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಸಾಮಾಜಿಕ ಒಗ್ಗಟ್ಟು ಸಾಧಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ದೊಡ್ಡಗಾಡಿಗನಹಳ್ಳಿ ಗ್ರಾಮಸ್ಥರು ಸತ್ಯದೇವತೆ ಪವಾಡ ಶ್ರೀ ಲಕ್ಷ್ಮೀ ದೇವಿ ಅಮ್ಮನವರ ದೇವಾಲಯವನ್ನು ನಿರ್ಮಾಣ ಮಾಡಿರುವುದು ಶ್ಲಾಘನೀಯವಾದುದು ಎಂದು ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ಸಂಸ್ಥೆಯ ನಿರ್ದೇಶಕ ಹೆಚ್.ಟಿ.ಲೋಕೇಶ್ ಹೇಳಿದರು.

ಅವರು ತಾಲ್ಲೂಕಿನ ಬೂಕನಕೆರೆ ಹೋಬಳಿಯ ದೊಡ್ಡಗಾಡಿಗನಹಳ್ಳಿ ಗ್ರಾಮಸ್ಥರು ನೂತನವಾಗಿ ನಿರ್ಮಾಣ ಮಾಡಿರುವ ಶ್ರೀ ಲಕ್ಷ್ಮೀ ದೇವಿ ಅಮ್ಮನವರ ದೇವಾಲಯದ ಲೋಕಾರ್ಪಣೆ ಹಾಗೂ ಬಸಪ್ಪ ಸ್ವಾಮಿಗೆ ಮುದ್ರಾಧಾರಣೆ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ಗ್ರಾಮಸ್ಥರು ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದರು. ದೇವಾಲಯದ ವಾತಾವರಣವು ಮನಸ್ಸಿನ ಒತ್ತಡ ಮತ್ತು ಉದ್ವೇಗವನ್ನು ಕಡಿಮೆ ಮಾಡಿ ಶಾಂತಿಯನ್ನು ನೀಡುತ್ತದೆ. ಆತ್ಮ ಸಾಕ್ಷಿಯನ್ನು ಜಾಗೃತಗೊಳಿಸುತ್ತದೆ. ದೇವಾಲಯಗಳು ಭಕ್ತರನ್ನು ಒಂದೆಡೆ ಸೇರಿಸಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಸಂತಸದ ಕ್ಷಣಗಳನ್ನು ಕಳೆಯಲು ಸಹಕಾರಿಯಾಗುತ್ತದೆ. ಪ್ರಪಂಚವು ವಿಜ್ಞಾನ-ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರಿದರೂ ನಮ್ಮ ದೇಶದ ಜನರು ದೇವಸ್ಥಾನ ಮಠ ಮಂದಿರಗಳನ್ನು ಬಿಟ್ಟು ಇರಲು ಸಾಧ್ಯವಿಲ್ಲ. ಎಂದರು. ದೇವಸ್ಥಾನದ ಉದ್ಘಾಟನೆಯ ಹಿನ್ನೆಲೆಯಲ್ಲಿ ವೇದ ಪಂಡಿತ್ ಕುಂದೂರು ಅರುಣ್‌ಕುಮಾರ್ ಶಾಸ್ತ್ರಿ ನೇತೃತ್ವದಲ್ಲಿ ಎರಡು ದಿನಗಳ ಕಾಲ ವಿವಿಧ ಹೋಮ ಹವನ, ಶಿಲಾ ಬಿಂಬ, ಪ್ರಾಣ ಪ್ರತಿಷ್ಠಾಪನೆ ಮತ್ತಿತರರ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಸಿದ್ದ ಎಲ್ಲಾ ಭಕ್ತಾಧಿಗಳಿಗೆ ದೊಡ್ಡಗಾಡಿಗನಹಳ್ಳಿ ಗ್ರಾಮಸ್ಥರು ಹಾಗೂ ದೇವಾಲಯ ಸಮಿತಿಯ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಹೆಳವೇಗೌಡ, ಬಲ್ಲೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಿ.ಸಿ.ಕುಮಾರ್, ನಿರ್ದೇಶಕರಾದ ಬಲ್ಲೇನಹಳ್ಳಿ ರಮೇಶ್, ಬಿ. ಎಸ್.ರಾಮು, ಗಂಜಿಗೆರೆ ಪ್ರಾಥಮಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕುರುಬಹಳ್ಳಿ ಕೆ.ಬಿ.ನಾಗೇಶ್, ಮುಖಂಡರಾದ ರಂಗಸ್ವಾಮೀಗೌಡ, ರಮೇಶ್, ಕೃಷ್ಣೇಗೌಡ, ರಾಜೇಗೌಡ, ಕಿಶೋರ್, ಕಿರಣ್, ಧನಂಜಯ್, ರಂಗರಾಜು, ಬಾಲು, ಚಂದ್ರು, ಡಿ.ವಿ.ಕುಮಾರ್, ಶ್ರೀ ಲಕ್ಷ್ಮೀ ದೇವಿ ದೇವಾಲಯದ ಅರ್ಚಕ ಡಿ.ಪಿ.ಸಾಗರ್, ಜೋಡಿಲಿಂಗೇಶ್ವರ ದೇವಾಲಯದ ಅರ್ಚಕ ಪ್ರಕಾಶ್, ಸೇರಿದಂತೆ ದೊಡ್ಡಗಾಡಿಗನಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳ ಸಾವಿರಾರು ಮಂದಿ ಭಕ್ತಾಧಿಗಳು ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.



ಎಚ್.ಡಿ.ಕೋಟೆ: ಸರಗೂರಿನ ಸ್ವಾಮಿ ವಿವೇಕಾನಂದ ಆಸ್ಪತ್ರೆಯ ಸಾಮಾಜಿಕ ಆರ್ಥಿಕ ಸಬಲೀಕರಣ ವಿಭಾಗದ ವತಿಯಿಂದ ಹತ್ತು ದಿನಗಳು ನಡೆದ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭ ಪಟ್ಟಣದ ವನವಾಸಿ ಕಲ್ಯಾಣ್ ಪರಿಷದ್ ಕೇಂದ್ರದಲ್ಲಿ ನಡೆಯಿತು.ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್, ಲಾ-ಅಸೋಶಿಯೇಷನ್ ಅಧ್ಯಕ್ಷ ಗಂಗರಾಜು, ಭರತ್, ಕಾರ್ಯಕ್ರಮ ಸಂಯೋಜಕ ನಾಗೇಶ್, ವ್ಯವಸ್ಥಾಪಕ ಬಿ.ವಿ.ಶಂಕರ್, ಆಸ್ಪತ್ರೆ ಸಿಬ್ಬಂದಿಗಳಾದ ರವಿಕುಮಾರ್, ಶಿವಕುಮಾರ್, ಸತೀಶ್, ಸಣ್ಣಸ್ವಾಮಿ ಇದ್ದರು.

# ಇಂದಿನಿಂದ ಕಪ್ಪಡಿ ಜಾತ್ರೆ

## ಶಿವರಾತ್ರಿಯ ದಿನ ಪ್ರಾರಂಭವಾಗಿ ಮಾ.12ಯಂದು ಮಾದಲಿ ಸೇವೆ'ಯೊಂದಿಗೆ ಒಂದು ತಿಂಗಳ ಜಾತ್ರೆಗೆ ತೆರೆ

ಕೆ. ಆರ್ .ನಗರ : ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಕಾವೇರೀ ನದಿಯ ದಡದಲ್ಲಿರುವುದು ಶ್ರೀ ಕ್ಷೇತ್ರ ಕಪ್ಪಡಿ. ಮಂಟೇಸ್ವಾಮಿ ಶಿಷ್ಯರಾದ ರಾಚಪ್ಪಾಜಿ ಹಾಗೂ ಚನ್ನಮ್ಮಾಜಿಯ ಗದ್ದುಗೆಗಳು ಇಲ್ಲಿ ನೋಡಲು ಸಿಗುತ್ತದೆ . ಅವರ ನೆನಪಿಗಾಗಿ ನಡೆಯುವ ಜಾತ್ರೆಯು ಈ ಬಾರಿ ಫೆಬ್ರವರಿ 15ರ ಶಿವರಾತ್ರಿಯ ದಿನ ಪ್ರಾರಂಭವಾಗಿ ಮಾರ್ಚ್ 12 ಗುರುವಾರ ದಿನ 'ಮಾದಲಿ ಸೇವೆ'ಯೊಂದಿಗೆ ಒಂದು ತಿಂಗಳ ಜಾತ್ರೆಯ ಆಚರಣೆಯ ವೈಭವಕ್ಕೆ ತೆರೆ ಬೀಳಲಿದೆ.

ಶ್ರೀ ಕಪ್ಪಡಿ ಕ್ಷೇತ್ರದಲ್ಲಿ ಉರಿಗಣ್ಣ ರಾಚಪ್ಪಾಜಿ ಮತ್ತು ಚೆನ್ನಮ್ಮಾಜಿ ದೇವರ ಗದ್ದುಗೆ ಮುಂದೆ ಭಕ್ತಿಭಾವದಿಂದ ಬೇಡಿಕೊಂಡರೆ ಬೇಡಿದ್ದನ್ನು ಈಡೇರಿಸುವುದು ಈ ಕ್ಷೇತ್ರದ ಮಹಿಮೆಯಾಗಿದೆ.

ಹೀಗಾಗಿಯೇ ಭಕ್ತರು ಸದಾ ಇಲ್ಲಿಗೆ ಆಗಮಿಸುತ್ತಿರುತ್ತಾರೆ. ಹೆಚ್ಚಿನ ಭಕ್ತರು ಪೂಜಾಕೈಂಕರ್ಯ ನೆರವೇರಿಸಿ ದೇವರ ದರ್ಶನ ಮಾಡಿಕೊಂಡು ಬರಲೆಂದು ದೇಗುಲಗಳಿಗೆ ತೆರಳುತ್ತಾರೆ. ಆದರೆ ಕಪ್ಪಡಿ ಕ್ಷೇತ್ರದಲ್ಲಿ ದೇವರ ಮುಂದೆ ತಮ್ಮ ಕಷ್ಟಗಳನ್ನು ಹೇಳಿಕೊಂಡು ಪರಿಹರಿಸುವಂತೆ ಹರಕೆ ಕಟ್ಟಲು ಅಥವಾ ಹರಕೆ ಮಾಡಿದ್ದು ಈಡೇರಿದ್ದರಿಂದ ಅದನ್ನು ತೀರಿಸಲೆಂದು ಭಕ್ತರು ಬರುತ್ತಾರೆ. ರಾಚಪ್ಪಾಜಿವರ ಧ್ಯಾನಪೀಠ 'ಉರಿಗದ್ದಿಗೆ' ಮೇಲೆ ಕೂರುವುದು ಜಾತ್ರೆಯ ಮಹತ್ವದ ಆಚರಣೆಗಳಲ್ಲೊಂದು.

ಈ ಪೀಠ ಸತ್ಯ, ನ್ಯಾಯ, ನೀತಿ, ಸಮಾನತೆ, ಜಾತ್ಯಾತೀತತೆಯನ್ನು ಸಾರುವ ಪೀಠ ಎನಿಸಿದೆ. ಪ್ರಸ್ತುತ ಮಳವಳ್ಳಿ ಸ್ವಾಮೀಜಿ, ಬೊಪ್ಪಣಪುರ ಸ್ವಾಮೀಜಿ ವರ್ಷ ಬಿಟ್ಟು ವರ್ಷ ಈ ಉರಿಗದ್ದಿಗೆ ಪೀಠರೋಹಣ ಮಾಡುವ ಪದ್ಧತಿ ಇದೆ.






### ವ್ಯಾಜ್ಯಗಳ ಇತ್ಯರ್ಥಗೊಳಿಸುವ ಕ್ಷೇತ್ರ

ಕಪ್ಪಡಿ ಕ್ಷೇತ್ರದ ಮಹಿಮೆ ಮತ್ತು ದೇವರ ಕಾರ್ಣಿಕ ಹೇಗಿದೆ ಎಂದರೆ ಸುತ್ತಮುತ್ತಲಿನ ಯಾವುದೇ ಪ್ರಾಂತ್ಯದಲ್ಲಿ ಆಸ್ತಿ, ಪಾಸ್ತಿ, ಯಾವುದೇ ವ್ಯವಹಾರದಲ್ಲಿ ಲೋಪ, ತಕರಾರು, ಪ್ರಕರಣಗಳು, ಕುಟುಂಬದಲ್ಲಿ ಭಿನ್ನಾಭಿಪ್ರಾಯ, ಘರ್ಷಣೆ, ಒಡಕು, ಉದ್ಭವವಾದಾಗ ರಾಚಪ್ಪಾಜಿಯವರ ಮೇಲೆ ಆಣೆ ಪ್ರಮಾಣ ಮಾಡುತ್ತಾರೆ. ಇವತ್ತಿಗೂ ಕೋರ್ಟ್, ಕಚೇರಿ, ಪಂಚಾಯಿತಿಗಳಲ್ಲಿ ಇತ್ಯರ್ಥವಾಗದ ಹಲವಾರು ಪ್ರಕರಣಗಳನ್ನು ಜನರು ಸನ್ನಿಧಿಗೆ ಬಂದು ಆಣೆ ಪ್ರಮಾಣ ಮಾಡಿ ಬಗೆಹರಿಸಿರುವ ನಿದರ್ಶನಗಳ ಬಗ್ಗೆ ಇಲ್ಲಿನ ಸುತ್ತಮುತ್ತಲಿನ ಗ್ರಾಮಸ್ಥರು ಹೇಳುತ್ತಾರೆ. ಸರಿ ಸುಮಾರು ಒಂದು ತಿಂಗಳ ನಡೆಯುವ ಈ ಜಾತ್ರೆಗೆ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತಾದಿಗಳು ಆಗಮಿಸುತ್ತಾರೆ. ಇವರ ಸುರಕ್ಷತೆಗಾಗಿ ತಾಲೂಕು ಆಡಳಿತ ಮಂಡಳಿ ಎಲ್ಲಾ ರೀತಿಯ ಮಂಜಾಗ್ರತ ಕ್ರಮ ಕೈಗೊಂಡಿದೆ. ಪಾರ್ಕಿಂಗ್ ಗಾಗಿ ಟೆಂಡರ್ ಪಡೆದವರು ಸುತ್ತ ಮುತ್ತಿನ ಗದ್ದೆಗಳನ್ನು ಹದ



ಮಾಡಿ ಇಟ್ಟುಕೊಂಡಿದ್ದಾರೆ. ಈಗಾಗಲೇ ಎಲ್ಲಾ ರೀತಿಯ ಅಂಗಡಿಗಳು ತಲೆ ಎತ್ತಿ ನಿಂತಿದೆ ಪೋಲಿಸ್ ಇಲಾಖೆ ಕೂಡ ಜನರನ್ನು ನಿಯಂತ್ರಿಸಲು ಸಜ್ಜಾಗಿದೆ . ಒಟ್ಟಾರೆಯಾಗಿ ಒಂದು ತಿಂಗಳ ನಡೆಯುವ ಶ್ರೀ ಕ್ಷೇತ್ರ ಕಪ್ಪಡಿ ಜಾತ್ರೆ ನೋಡಲು ಭಕ್ತಾದಿಗಳು ಕಾತುರದಿಂದ ಕಾಯುತಿದ್ದಾರೆ

## ಸ್ಟಾರ್ಟ್ ಆಪ್ ಗಳಿಗಾಗಿ ಬೆಂಬಲಿಸಲು ಕೋರಿದ ಯಶಸ್ವಿನಾಗ್

ಮೈಸೂರು: ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿಧಿ ಐಟಿಬಿಐ ಯೋಜನೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಿಎಸ್‌ಟಿ- ಐಟಿಬಿಐ ಜಿಎಸ್‌ಎಸ್‌ಎಸ್ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್ ಫೌಂಡೇಷನ್ ವತಿಯಿಂದ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಅಂತಜ್ಞಾನ ಆಧಾರಿತ ಸ್ಟಾರ್ಟ್ ಅಪ್‌ಗಳಿಗೆ ಮಾರ್ಗದರ್ಶನ ಹಾಗೂ ಬೆಂಬಲ ಒದಗಿಸಲಾಗುತ್ತಿದ್ದು, ಅಂತಹವರು ಪ್ರಯೋಜನ ಪಡೆಯಬೇಕೆಂದು ಸಿಇಓ ಯಶಸ್ವಿನಾಗ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜಿಎಸ್‌ಎಸ್‌ಎಸ್ ಮಹಿಳಾ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಸಂಸ್ಥೆ ಆವರಣದಲ್ಲಿ ಈ ಸಂಸ್ಥೆಯಿದೆ. ಅಂತಹವರಿಗೆ ಇದು ಮೂಲ ಸೌಕರ್ಯ, ಮಾರ್ಗದರ್ಶನ, ನೆಟ್‌ವರ್ಕಿಂಗ್, ಮಾರುಕಟ್ಟೆ ಸಂಪರ್ಕ ಹಾಗೂ ಅನುದಾನ ಮಾರ್ಗದರ್ಶನ ಒದಗಿಸಲಿದೆ. ಪ್ರೀ ಇನ್‌ಕ್ಯುಬೇಷನ್ ಮತ್ತು ಐಡಿಯಾ ಮಾರ್ಗದರ್ಶನ, 100 ಲಕ್ಷದವರೆಗೆ ಸ್ಟಾರ್ಟಪ್ ಅನುದಾನ, ಆಹಾರ ಸಂಸ್ಕರಣೆ ಉದ್ದಿಮೆಗಳಲ್ಲಿ ತೊಡಗಿರುವವರಿಗೆ ಸಂಸ್ಥೆಯಲಿ ಲಭ್ಯವಿರುವ ಯಂತ್ರೋಪಕರಣ ಬಳಕೆವೆ ಅವಕಾಶ, ಪ್ರೋಟೋಟೈಪ್ ಅಭಿವೃದ್ಧಿ ಸಹಾಯ, ವ್ಯವಹಾರ ಮಾರ್ಗದರ್ಶನ ಮತ್ತು ಹೂಡಿಕೆದಾರರ ಸಂಪರ್ಕ ಹಾಗೂ ಅನುದಾನ ನೆರವು ಇದರಲ್ಲಿ ಸೇರಿವೆ. ಅತಿ ಕಡಿಮೆ ಶುಲ್ಕ ನೀಡಬಹುದಾಗಿದೆ ಎಂದು ಮಾಹಿತಿ ನೀಡಿದರು. ಸಂಜಯ್ ಪಾಂಡೆ, ಅಶೋಕಾನಂದ ಇದ್ದರು.




## ಫೆ.17ಕ್ಕೆ ಶಿವನಸ್ಮರಣೆ ಸಂಜೆ

ಮೈಸೂರು: ರಾಘವೇಂದ್ರ ನಗರದ ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಮಹಾ ಶಿವರಾತ್ರಿ ಅಂಗವಾಗಿ ಫೆ. 17ರ ಸಂಜೆ 5 ರಿಂದ ರಾತ್ರಿ 9.30 ರವರೆಗೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಶಿವನಸ್ಮರಣೆ ಶೀರ್ಷಿಕೆ ಅಡಿಯಲ್ಲಿ ಭಕ್ತಿಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಂಡದ ಗಾಯಕ ಸುಧೀಂದ್ರ ತಿಳಿಸಿದರು.

ಡಾ. ರಾಜ್‌ಕುಮಾರ್, ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಗೂ ಮಳವಳ್ಳಿ ಮಹದೇವಸ್ವಾಮಿ ಅವರು ಹಾಡಿರುವ ಮಹದೇಶ್ವರರ ಬಗೆಗಿನ ಭಕ್ತಿಗೀತೆಗಳನ್ನು ತಂಡದ ಮುಖ್ಯಸ್ಥರಾದ ಮೈಸೂರು ಜಯರಾಂ, ಸುರೇಶ್, ನಂಜುಂಡಯ್ಯ, ತೇಜಸ್ವಿನಿ ಹಾಗೂ ಶ್ರುತಿ ಮಂಡ್ಯ ಮೊದಲಾದವರು ಹಾಡಲಿದ್ದಾರೆ. ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶೇಷ ನಾರಾಯಣ್ ಜ್ಯೋತಿ ಬೆಳಗಿಸುವರು, ಡಾ.ವೈ.ಡಿ. ರಾಜಣ್ಣ, ಅಂಶಿ ಪ್ರಸನ್ನಕುಮಾರ್ ಇನ್ನಿತರರು ವೇದಿಕೆಯಲ್ಲಿರುವರು. ಇದು ಕರೋಕೆ ಕಾರ್ಯಕ್ರಮವಾಗಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ತಂಡದ ಮುಖ್ಯಸ್ಥ ಮೈಸೂರು ಜಯರಾಂ, ಸುರೇಶ್, ಸರ್ವಮಂಗಳ, ಲತಾ ಬಾಲಕೃಷ್ಣ ಇದ್ದರು.



# ಜಾನಪದ ವಿವಿಯಿಂದ ಸಿಗದ ಗೌರವಧನ



ಮೈಸೂರು: ಹಾವೇರಿಯ ಗೊಟಗೋಡಿಯಲ್ಲಿನ ಕರ್ನಾಟಕ ಜಾನಪದ ವಿವಿ ಆಫ್ರಿಕನ್ ಜಾನಪದ ಕೃತಿ ಪ್ರಕಟಿಸಿ, ಮಾರಾಟಕ್ಕೆ ಬಿಡುಗಡೆ ಮಾಡಿದ್ದರೂ ಸಹಾ ಅದರಲ್ಲಿ ಪಾಲ್ಗೊಂಡವರಿಗೆ ಇನ್ನೂ ಗೌರವ ಧನ ನೀಡಿಲ್ಲ. ಈಗಿನ ಕುಲಪತಿಗಳು ಈ ಬಗ್ಗೆ ಗಮನ ಸೆಳೆದರೆ ಅಸಡ್ಡೆಯಿಂದ ಪ್ರತಿಕ್ರಿಯಿಸುತ್ತಾರೆ ಎಂದು ಸಂಪಾದಕ ಡಾ.ಹಾ.ತಿ. ಕೃಷ್ಣೇಗೌಡ ಕಿಡಿ ಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರಪಂಚದ ಜಾನಪದ ವಿಚಾರಗಳನ್ನು ಕನ್ನಡಿಗರಿಎ ದೊರೆಯುವಂತೆ ಮಾಡುವ, ಜಾನಪದ ಅರಿವನ್ನು ವಿಸ್ತರಿಸಬೇಕೆಂಬ ಆಶಯದೊಡನೆ ಕನ್ನಡ ಜಾನಪದ ವಿಶ್ವಕೋಶ ಯೋಜನೆಯನ್ನು ವಿವಿ ಆರಂಭಿಸಿತು. ಇದರ ಅಂಗವಾಗಿ ಆಫ್ರಿಕನ್ ಜಾನಪದ ಕೃತಿ ಕೆಲಸ ಕೈಗೆತ್ತಿಕೊಳ್ಳಲಾಯಿತು. ಇದು ಸುಮಾರು 7 ಲಕ್ಷ ರೂ.ಗಳ ಯೋಜನೆ, ತಲಾ ಪ್ರತಿ 550 ರೂ, 1000 ಪ್ರತಿ ಮುದ್ರಣದ್ದಾಗಿ, ಬಿಡುಗಡೆಯೂ ಆಗಿದೆ. ಇದಕ್ಕೆ ಸುಮಾರು 2 ವರ್ಷ ಕಾಲ ಎಲ್ಲರೂ ಶ್ರಮಿಸಿದೆವು. ಆದರೆ ಡಿಟಿಪಿಯವರ ಹಣ ಸೇರಿದಂತೆ ಯಾರಿಗೂ ಗೌರವಧನ ಇನ್ನೂ ನೀಡಿಲ್ಲ. ಈ ಕೃತಿಗಾಗಿ ಶ್ರಮಿಸಿದ ಕೆಲವರು ಹಾಸಿಗೆ ಹಿಡಿದಿದ್ದಾರೆ. ಕೊನೆಗೆ ಮೊದಲು ಅವರ ಗೌರ ವಧನ ನೀಡಿದರೂ ಅವರಿಗೆ ಉಪ ಯೋಗವಾಗುತ್ತದೆ ಎಂದು ತಾವು ಹಲವಾರು ಬಾರಿ ಮನವಿ ಮಾಡಿದರೂ ಈಗಿನ ಕುಲಪತಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

▶▶ ಲೇಖಕ ಡಾ.ಹಾ.ತಿ. ಕೃಷ್ಣೇಗೌಡ ಅಸಮಾಧಾನ

ಈ ಬಗ್ಗೆ ಮನವಿ ಮಾಡಿದರೆ ಡಾ.ಟಿ.ಎಂ. ಭಾಸ್ಕರ್ ಇದು ಹಿಂದಿನ ಕುಲಪತಿಗಳ ಅವಧಿಯಲ್ಲಿ ಆದ ಕೆಲಸ, ನನ್ನ ಜವಾಬ್ದಾರಿಯಿಲ್ಲ ಎಂದು ಅಸಡ್ಡೆಯಿಂದ ಹೇಳುತ್ತಾರೆ. ಈಗಲಾದರೂ ಗೌರವಧನ ನೀಡಲು ಮುಂದಾಗದಿದ್ದಲ್ಲಿ ಸಿಎಂ, ಉನ್ನತ ಶಿಕ್ಷಣ ಸಚಿವರು ಹಾಗೂ ರಾಜ್ಯಪಾಲರ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಿಂಡಿಕೇಟ್ ಸದಸ್ಯರಾದ ಮೋಹನ್‌ಕುಮಾರ್, ಚಂದ್ರಶೇಖರ್ ಗೊರವರ್, ಪ್ರೊ, ಶೋಭಾ, ಡಾ.ಪಿ. ಗಿರೀಶ್, ಡಾ. ಭಾರತಿ ಮರವಂತೆ ಇದ್ದರು.

# ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ



ಚಾಮರಾಜನಗರ,ನಗರದ ಪ್ರವಾಸಿಮಂದಿರದ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ 18 ಮಂದಿ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ ಮಾಡಿದರು.

ನಂತರ ಮಾತನಾಡಿದ ಅವರು ಸರ್ಕಾರದಿಂದ ಬರುವಂತಹ ಸೌಲಭ್ಯಗಳನ್ನ, ಸದ್ಬಳಕೆ ಮಾಡಿಕೊಳ್ಳಬೇಕು. ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಸಾಕಷ್ಟು ಅನುಕೂಲಗಳನ್ನ ಮಾಡಿದೆ. ಸಣ್ಣ ಕೈಗಾರಿಕೆ, ಗುಡಿಕೈಗಾರಿಕೆ, ಪಶುಸಂಗೋಪನೆ, ಸೇರಿದಂತ್ತೆ ಹಲವಾರು ಯೋಜನೆಯನ್ನ ರೂಪಿಸಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆಯಲು ಅನೇಕ ಸವಲತ್ತುಗಳನ್ನ ಕೊಡುತ್ತಿದೆ, ಇದನ್ನ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಬದುಕುಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸರ್ಕಾರದಿಂದ ಸಿಗುವ ಟ್ರೈನಿಂಗ್‌ಗಳನ್ನ ಕಾಲಾಕಾಲಕ್ಕೆ ಪಡೆದುಕೊಂಡು ಉತ್ತಮ ಪಡಿಸಿಕೊಂಡು, ಇತರರಿಗೂ ಮಾದರಿಯಾಗಬೇಕು. ಮತ್ತು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಚಾಡಾ ಅಧ್ಯಕ್ಷ ಮಹಮದ್‌ಅಸ್ಗರ್ಮುನ್ನಾ, ಎಸ್,ಪಿ,ಕೆ, ಉಮೇಶ್, ನಗರಸಭಾ ನಾಮ ನಿರ್ದೇಕ ಸ್ವಾಮಿ, ಎ,ಪಿ,ಎಂ,ಸಿ ಸದಸ್ಯ ಪ್ರದೀಪ್, ಚೂಡಾ ಸದಸ್ಯ ರಾಜೇಂದ್ರ (ದ್ವಾರ್ಕಿ), ನಗರಸಭಾ ಮಾಜಿ ಸದಸ್ಯ ರಾಜಪ್ಪ. ಗ್ರಾ,ಪಂ, ಮಾಜಿ ಅಧ್ಯಕ್ಷ ರೋಪೇಶ್, ಪುರುಸೋತ್ತಮ್, ಇಲಾಖೆ ಜಿಲ್ಲಾ ವ್ಯವಸ್ಥಾಪಕರಾದ ಚೈತ್ರ, ರಾಜೇಂದ್ರ, ಸಿಬ್ಬಂದಿ ವರ್ಗ ಮತ್ತಿತರರು ಹಾಜರಿದ್ದರು.

## ಕರವೇಯಿಂದ ಪಂಜಿನ ಮೆರವಣಿಗೆ

# ಚಾಮರಾಜನಗರ ಅಭಿವೃದ್ಧಿಗೆ ಒತ್ತಾಯ

ಚಾಮರಾಜನಗರ, ಚಾಮರಾಜನಗರ ಅಭಿವೃದ್ಧಿಗಾಗಿ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ವತಿಯಿಂದ ನಗರದಲ್ಲಿ ಪಂಜಿನ ಮೆರವಣಿಗೆ ನಡೆಯಿತು.

ನಗರದ ಪ್ರವಾಸಿಮಂದಿರ ಆವರಣ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಪಂಜಿನ ಮೆರವಣಿಗೆ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು.ಪ್ರತಿಭಟನೆಯಲ್ಲಿ ವೇದಿಕೆಯ ತಾಲೂಕು ಅಧ್ಯಕ್ಷ ಕ್ವ ನವೀನ್ ಮಾತನಾಡಿ, ಜನಪ್ರತಿನಿಧಿಗಳಾಗಲಿ, ಜಿಲ್ಲಾಡಳಿತ ವಾಗಲಿ, ಸರ್ಕಾರವಾಗಲಿ ನಗರದ ಅಭಿವೃದ್ಧಿಯ ಬಗ್ಗೆ ಧ್ವನಿಯೆತ್ತಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಸರಿ ಇಲ್ಲ ಚರಂಡಿ ವ್ಯವಸ್ಥೆ ಇಲ್ಲ, ಪಚ್ಚಪ್ಪ ಸರ್ಕಲ್, ಮರಳ್ಳಿ ಸರ್ಕಲ್ ಸೋಮವಾರ ಪೇಟೆ ರಸ್ತೆ ಹಾಗೂ ಮರಳ್ಳಿ ಗೆ ಹಾದು ಹೋಗುವಂತಹ ರೋಡ್ ನಲ್ಲಿ ವಿದ್ಯುತ್ ದೀಪಗಳಿಲ್ಲದೆ ಕಗ್ಗತ್ತಲ್ಲಿನಲ್ಲಿ ಜನರ ಓಡಾಡುವಂತಾಗಿದೆ ಎಂದು ದೂರಿದರು.

ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಕಾವೇರಿ ನೀರು ಚರಂಡಿಗೆ ಹೋಗುತ್ತಿರುವುದನ್ನು ಸರಿಪಡಿಸಿಲ್ಲ.




ಪಚ್ಚಪ್ಪ ಸರ್ಕಲ್ ನಲ್ಲಿ ಸಾರ್ವಜನಿಕರಿಗೆ ಸಾರ್ವಜನಿಕ ಶೌಚಾಲಯ ಇಲ್ಲ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಆರೋಪಿಸಿದರು. ಎಲ್ಲ ಸಮಸ್ಯೆಗಳನ್ನು ಕೂಡಲೇ ನಗರಸಭೆ, ಜಿಲ್ಲಾಡಳಿತ ಬಗೆಹರಿಸಬೇಕು ಇಲ್ಲದಿದ್ದರೆ ನಗರಸಭೆಗೆ ಬೀಗ ಹಾಕಿ ಅಹೋರಾತ್ರಿ ಧರಣಿ ಮಾಡಲಾಗುವುದು ಎಂದು ಎಚ್ಚರಿಸಿದರು. ಮೆರವಣಿಗೆಯಲ್ಲಿ ಟೌನ್ ಅಧ್ಯಕ್ಷ ಮಹೇಂದ್ರ ಉಪ್ಪಾರ್ , ಕಾರ್ಮಿಕ ಘಟಕದ ಅಧ್ಯಕ್ಷ ಹರೀಶ್ ನಾಯಕ್ ,ತಾಲೂಕು ಉಪಾಧ್ಯಕ್ಷ ರಾದ ಅವಿನಾಶ್ ,ಉಮೇಶ್, ಪ್ರಧಾನ ಕಾರ್ಯದರ್ಶಿ ಅರ್ಜುನ್ ಗೌರವ ಸಲಹೆಗಾರ ಅಮ್ಜದ್ ಉಲ್ಲಾ ಖಾನ್ ಕಾರ್ಯದರ್ಶಿ ರಾಜೇಂದ್ರ, ಗೌರವಾಧ್ಯಕ್ಷ ಪುರುಷೋತ್ತಮ್, ಅಫ್ನನ್, ಫರಾಜ್ ನಲ್ಲೂರು ನಟರಾಜು, ಕಾಡಳ್ಳಿ ಕುಮಾರ ಮಹದೇವಸ್ವಾಮಿ, ಗಣೇಶ ದೊಡ್ಡಮೋಳೆ, ರಿಜ್ವಾನ್ , ಮಹೇಂದ್ರ ಇತರರು ಭಾಗವಹಿಸಿದ್ದರು.

# ಸಂಕ್ಷಿಪ್ತ ಸುದ್ದಿ

## ಗೃಹಲಕ್ಷ್ಮೀ ಆ್ಯಪ್‌ಗೆ ನೋಂದಾಯಿಸಿ

**ತುಮಕೂರು:** ಗೃಹಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆಪ್‌ನಲ್ಲಿ ಮಹಿಳಾ ಉದ್ಯಮಿಗಳನ್ನು ನೋಂದಾಯಿಸಲು ಜನವರಿ 9ರಂದು ಗೃಹಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆಪ್‌ನ್ನು ಲಾಂಚ್ ಮಾಡಲಾಗಿದೆ. ಮಹಿಳಾ ಉದ್ಯಮಿಗಳ ನೋಂದಣಿ ಕಾರ್ಯ ಕೈಗೊಳ್ಳಲು ಮಹಿಳಾ ಉದ್ಯಮಿಗಳು ಮಾಹಿತಿ ನೀಡಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಮನವಿ ಮಾಡಿದ್ದಾರೆ.

ಆಕರ್ಷಕ/ಉತ್ತಮ ಉತ್ಪನ್ನಗಳ ತಯಾರು ಮಾಡುತ್ತಿರುವ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪಿನ ಮಹಿಳಾ ಉದ್ಯಮಿಗಳು, NRLM ಫಲಾನುಭವಿಗಳು/NRLMಉದ್ಯಮಿಗಳು, ಜಿಲ್ಲಾ ಸ್ತ್ರೀ ಒಕ್ಕೂಟ ಸದಸ್ಯರು ಉತ್ಪಾದಿಸುತ್ತಿರುವ ವಸ್ತುಗಳು, Karnataka Small Scale Industries Association (KASSIA) Karnataka ಘಟಕಗಳ ಮಹಿಳಾ ಉದ್ಯಮಿಗಳು, RUDSETI/RSETI(ಧರ್ಮಸ್ಥಳ) ಮೂಲಕ ತರಬೇತಿ ಪಡೆದು ಸ್ವ-ಉದ್ಯೋಗ ನಡೆಸುತ್ತಿರುವ ಮಹಿಳೆಯರು, ನಿಗಮದಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಪಡೆದು ಉತ್ತಮ ಉತ್ಪನ್ನಗಳ ತಯಾರು ಮಾಡುತ್ತಿರುವ ಮಹಿಳಾ ಫಲಾನುಭವಿಗಳು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಯಶಸ್ವಿ ಮಹಿಳಾ ಉದ್ಯಮಿಗಳು ತಾವು ತಯಾರಿಸುವ ಉತ್ಪನ್ನಗಳ ಮಾಹಿತಿಯನ್ನು ಜರೂರಾಗಿ ಜಿಲ್ಲೆಯ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ ಆವರಣ, ಎಂ.ಜಿ ರಸ್ತೆ, ತುಮಕೂರು-572101 ಇಲ್ಲಿ ಮಹಿಳಾ ಅಭಿವೃದ್ಧಿ ನಿರೀಕ್ಷಕರನ್ನು ಸಂಪರ್ಕಿಸಿ ನೀಡಬೇಕೆಂದು ಅವರು ತಿಳಿಸಿದ್ದಾರೆ.

## ಫೆ.15ರಂದು 'ಸಂತ ಸೇವಾಲಾಲ್ ಜಯಂತಿ'

**ತುಮಕೂರು:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಜಿಲ್ಲಾ ಬಂಜಾರ (ಲಂಬಾಣಿ) ಸೇವಾಲಾಲ್ ಸೇವಾ ಸಂಘದ ಸಂಯುಕ್ತಾಶ್ರಯದಲ್ಲಿ ಫೆಬ್ರವರಿ 15ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಕುಣಿಗಲ್ ರಸ್ತೆಯಲ್ಲಿರುವ ಜಿಲ್ಲಾ ಬಂಜಾರ ಭವನದಲ್ಲಿ "ಸಂತ ಸೇವಾಲಾಲ್ ಜಯಂತಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ಹಾಗೂ ಸಂಸದ ವಿ.ಸೋಮಣ್ಣ ಅವರ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ನೆರವೇರಿಸಲಿದ್ದಾರೆ. ನಗರ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲೆಯ ವಿವಿಧ ಸಚಿವರು, ಸಂಸದರು, ವಿಧಾನಸಭೆ / ವಿಧಾನಪರಿಷತ್ತಿನ ಶಾಸಕರು, ವಿವಿಧ ಜನಪ್ರತಿನಿಧಿಗಳು, ಸಮಾಜದ ಗಣ್ಯರು, ವಿವಿಧ ಸಮುದಾಯದ ಸಂಘ-ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮ ಕುರಿತು ಎಸ್.ಎಸ್.ಐ.ಟಿ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ: ಡಿ.ರಾಜಾನಾಯಕ್ ಉಪನ್ಯಾಸ ನೀಡಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಬಂಜಾರ ಸಮಾಜದ(ಲಂಬಾಣಿ) ಸಾಧಕರನ್ನು ಸನ್ಮಾನಿಸಲಾಗುವುದು. ಸಮಾಜದ ಗಣ್ಯರು, ವಿವಿಧ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು ಮಿರ್ಜಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮಹಾಶಿವರಾತ್ರಿ : ಮಾಂಸ ಮಾರಾಟ ನಿಷೇಧ

**ತುಮಕೂರು:** ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಫೆಬ್ರವರಿ 14ರ ಸಂಜೆ 5 ರಿಂದ ಫೆ.15ರ ಮಧ್ಯರಾತ್ರಿ 12 ಗಂಟೆಯವರೆಗೆ ಮಾಂಸ ಮಾರಾಟ ನಿಷೇಧಿತ ದಿನವೆಂದು ಘೋಷಿಸಲಾಗುವುದು.

ಈ ಅವಧಿಯಲ್ಲಿ ಮಾಂಸ ಮಾರಾಟ ಮಾಡುವುದು, ಸಂಗ್ರಹಣೆ ಮಾಡುವುದನ್ನು ನಿಷೇಧಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಕಸಾಯಿಖಾನೆ ಹಾಗೂ ಎಲ್ಲಾ ರೀತಿಯ ಮಾಂಸ ಮಾರಾಟ ಮಳಿಗೆಗಳನ್ನು ಮುಚ್ಚತಕ್ಕದ್ದು ಎಂದು ಪಾಲಿಕೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.



### ಮದ್ದೂರು ನಗರಸಭೆಗೆ ಗ್ರಾ.ಪಂಗಳ ಸೇರ್ಪಡೆ ವಿವಾದ

# ಸರ್ಕಾರದ ಜೊತೆ ಚರ್ಚಿಸಿ ಅಗತ್ಯ ಕ್ರಮ: ಎಸ್. ಚಲುವರಾಯಸ್ವಾಮಿ ಪ್ರಕಟ



**ಮದ್ದೂರು:** ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸುವ ಸಲುವಾಗಿ ನಗರಸಭೆಗೆ ಗ್ರಾ.ಪಂಗಳ ಸೇರ್ಪಡೆಗೆ ಸಂಬಂಧ ಸರ್ಕಾರದ ಹಂತದಲ್ಲಿ ಮಾತನಾಡಿ ಕ್ರಮ ವಹಿಸುತ್ತೇವೆ ಹಾಗೂ ಮುಖ್ಯಮಂತ್ರಿಗಳು ಹಾಗೂ ಜಿಲ್ಲೆಯ ಶಾಸಕರು ಮತ್ತು ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ವಹಿಸುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಎಸ್. ಚಲುವರಾಯಸ್ವಾಮಿ ಹೇಳಿದರು.

ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮ ಪಂಚಾಯಿತಿಯನ್ನು ನಗರಸಭೆಯ ಮೇಲ್ದರ್ಜೆಗೇರಿಸುವ ಸಂಬಂಧ ಕುರಿತು ಗೆಜ್ಜಲಗೆರೆ ಗ್ರಾಮಸ್ಥರೊಂದಿಗೆ ಮದ್ದೂರು ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಪುರಸಭೆಯನ್ನು ನಗರಸಭೆ ಮಾಡಲು ಮದ್ದೂರು ತಾಲ್ಲೂಕಿನ ನಾಲ್ಕು ಗ್ರಾ.ಪಂ.ಗಳಾದ ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿ ಹಾಗೂ ಗೆಜ್ಜಲಗೆರೆ ಗ್ರಾ.ಪಂ ವ್ಯಾಪ್ತಿಯನ್ನು ನಗರಸಭೆಗೆ ಸೇರಿಕೊಳ್ಳುವ ಪ್ರಕ್ರಿಯೆ ಬಗ್ಗೆ ಕಾನೂನಿನ ಅನ್ವಯ ಕ್ರಮ ಕೈಕೊಳ್ಳುತ್ತೇವೆ. ಗ್ರಾಮಸ್ಥರ ಬೇಡಿಕೆಗಳನ್ನು ಅಧಿಕಾರಿಗಳ ಜೊತೆ ಸಭೆ ನೆಡಸಿ ಶೀಘ್ರದಲ್ಲೇ ಪರಿಶೀಲಿಸುತ್ತೇವೆ ಎಂದು ತಿಳಿಸಿದರು. 4 ಗ್ರಾಮ ಪಂಚಾಯತಿಗಳ ಗ್ರಾಮಸ್ಥರ ಜೊತೆ ಸಭೆ ನಡೆಸಿದ್ದೇವೆ. ಸಭೆಯಲ್ಲಿ ಗ್ರಾಮಸ್ಥರ ಅಹವಾಲು ಸ್ವೀಕರಿಸಿದ್ದೇವೆ.

ಈ ಸಂದರ್ಭದಲ್ಲಿ ಪ್ರತಿಭಟನೆಯನ್ನು ನಿಲ್ಲಿಸುವಂತೆ ತಿಳಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಮದ್ದೂರು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಕೆ. ಎಂ. ಉದಯ, ಜಿಲ್ಲಾಧಿಕಾರಿಗಳಾದ ಡಾ ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ. ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ಶೋಭಾ ರಾಣಿ, ಮದ್ದೂರು ತಹಸೀಲ್ದಾರ್ ಪರುಶರಾಮ್ ಸತ್ತಿಗೇರಿ ಹಾಗೂ ಗ್ರಾಮಸ್ಥರು ಇತರರು ಉಪಸ್ಥಿತರಿದ್ದರು.

# ಜಿಲ್ಲಾ ಮಂತ್ರಿಯಿಂದ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ

**ಮಂಡ್ಯ:** ಫೆಬ್ರುವರಿ 21 ರಂದು ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿರುವ ಉದ್ಯೋಗ ಮೇಳದ ಅಂಗವಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್. ಚಲುವರಾಯಸ್ವಾಮಿ ಅವರು ಉದ್ಯೋಗ ಮೇಳದ ಪೋಸ್ಟರ್ ಅನ್ನು ಇಂದು ಮದ್ದೂರು ಪ್ರವಾಸಿ ಮಂದಿರದಲ್ಲಿ ಬಿಡುಗಡೆ ಮಾಡಿದರು.

ಈ ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳು ಭಾಗವಹಿಸಲಿವೆ. ಜಿಲ್ಲೆಯ ಯುವಕ-ಯುವತಿಯರು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಚಿವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮದ್ದೂರು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಕೆ. ಎಂ. ಉದಯ, ಜಿಲ್ಲಾಧಿಕಾರಿಗಳಾದ ಡಾ ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ. ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ಶೋಭಾ ರಾಣಿ, ಮದ್ದೂರು ತಹಸೀಲ್ದಾರ್ ಪರುಶರಾಮ್ ಸತ್ತಿಗೇರಿ ಹಾಗೂ ಇತರರು ಉಪಸ್ಥಿತರಿದ್ದರು.



## ದೇವರಾಯನದುರ್ಗ : ಮಾ.3ರಂದು ಬ್ರಹ್ಮರಥೋತ್ಸವ



**ತುಮಕೂರು:** ಇತಿಹಾಸ ಪ್ರಸಿದ್ಧ ದೇವರಾಯನ ದುರ್ಗ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮರಥೋತ್ಸವವು ಮಾರ್ಚ್ 3ರಂದು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಲಿದೆ. ಕರಿಗಿರಿ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿರುವ ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಜಾತ್ರೆಯು ಫೆಬ್ರವರಿ 24 ರಿಂದ ಮಾರ್ಚ್ 8ರವರೆಗೆ ನಡೆಯಲಿದ್ದು, ಜಾತ್ರೆ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.

ಜಾತ್ರೆ ಅಂಗವಾಗಿ ಫೆ. 24ರಂದು ಸಂಜೆ 7 ಗಂಟೆಗೆ ಅಂಕುರಾರ್ಪಣ, ಫೆ. 25ರಂದು ಸಂಜೆ 7.30ಕ್ಕೆ ಧ್ವಜಾರೋಹಣ, ಫೆ. 26ರಂದು ಸಂಜೆ 7ಕ್ಕೆ ಶೇಷವಾಹನೋತ್ಸವ, ಫೆ. 27ರಂದು ಸಂಜೆ 7ಕ್ಕೆ ಸಿಂಹಾರೋಹಣ, ಫೆ. 28ರಂದು ಬೆಳಿಗ್ಗೆ 7 ಗಂಟೆಗೆ ಪುಷ್ಪರಥ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ರಥೋತ್ಸವದ ಅಂಗವಾಗಿ ಮಾ. 1ರಂದು ಸಂಜೆ 6ಕ್ಕೆ ಪ್ರಹ್ಲಾದೋತ್ಸವ, ರಾತ್ರಿ 12ಗಂಟೆಗೆ ರಾಮಾನುಜಕೂಟ ಸೇವೆ ಹಾಗೂ 12.30ಕ್ಕೆ ಕಲ್ಯಾಣೋತ್ಸವ; ಮಾ. 2ರಂದು ಮಧ್ಯಾಹ್ನ 12ಕ್ಕೆ ದೊಡ್ಡಗರುಡವಾಹನ, ಸಂಜೆ 5ಕ್ಕೆ ಗಜೇಂದ್ರ ಮೋಕ್ಷ, ಸಂಜೆ 6ಕ್ಕೆ ನವಿಲು ವಾಹನೋತ್ಸವ ಹಾಗೂ ಸಂಜೆ 7ಕ್ಕೆ ಮುತ್ತಿನ ಪಲ್ಲಕ್ಕಿ ಉತ್ಸವ; ಮಾ. 3ರಂದು ಬೆಳಿಗ್ಗೆ 8 ಗಂಟೆಗೆ ಯಾತ್ರಾದಾನ, ಬೆಳಿಗ್ಗೆ 10 ಗಂಟೆಗೆ ಬ್ರಹ್ಮರಥೋತ್ಸವ; ಮಾ. 4ರಂದು ಬೆಳಿಗ್ಗೆ 12 ಗಂಟೆಗೆ ಸೂರ್ಯಮಂಡಲೋತ್ಸವ, ರಾತ್ರಿ 8 ಗಂಟೆಗೆ ಬೆಳ್ಳಿ ಪಲ್ಲಕ್ಕಿ ಉತ್ಸವ, ರಾತ್ರಿ 10ಕ್ಕೆ ಅಶ್ವವಾಹನೋತ್ಸವ; ಮಾ. 5ರಂದು ಬೆಳಿಗ್ಗೆ 11ಕ್ಕೆ ತೀರ್ಥಸ್ನಾನ(ಹಸ್ತ ನಕ್ಷತ್ರದಲ್ಲಿ), ಮಾ. 6ರಂದು ರಾತ್ರಿ 9ಕ್ಕೆ ದವನೋತ್ಸವ, ಮಾ. 7 ಬೆಳಿಗ್ಗೆ 9.30ಕ್ಕೆ ಉಯ್ಯಾಲೋತ್ಸವ, 10.30ಕ್ಕೆ ಕುಂಭಿ ಬೆಟ್ಟದಲ್ಲಿ(ಪ್ರಾಕಾರೋತ್ಸವ); ಮಾ. 8ರಂದು ಬೆಳಿಗ್ಗೆ 9.30ಕ್ಕೆ ಮಹಾಭಿಷೇಕ ಹಾಗೂ ಮಧ್ಯಾಹ್ನ 12ಕ್ಕೆ ಗರುಡೋತ್ಸವ ಕಾರ್ಯಕ್ರಮಗಳು ಜರುಗಲಿವೆ.

# ಅಣೆಕಟ್ಟುಗಳು ಆಧುನಿಕ ಭಾರತದ ದೇವಾಲಯ: ಸಿಎಂ



**ಬೆಂಗಳೂರು:** ಅಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳು. ನಮ್ಮ ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದು ಕರೆದಿದ್ದರು. ಅವು ಕೇವಲ ಕಾಂಕ್ರೀಟ್ ರಚನೆಗಳಲ್ಲ, ಬದಲಿಗೆ ನಮ್ಮ ಕೃಷಿ ಸಮೃದ್ಧಿ ಮತ್ತು ಕೈಗಾರಿಕಾ ಪ್ರಗತಿಯ ಜೀವನಾಡಿಗಳಾಗಿವೆ, ಎಂದು ಮುಖ್ಯಮಂತ್ರಿಗಳು ಬಣ್ಣಿಸಿದರು.

ಶುಕ್ರವಾರ ಬೆಂಗಳೂರಿನ ಜೆ.ಎನ್.ಟಾಟಾ ಸಭಾಂಗಣದಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ, ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ, ಕೇಂದ್ರ ಜಲ ಆಯೋಗ (ಅಫಅ), ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ವಿಶ್ವಬ್ಯಾಂಕ್ ಸಹಯೋಗದಲ್ಲಿ ಆಯೋಜಿಸಲಾದ ಅಂತರರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ 2026 ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ದೇವರಾಜ ಅರಸು ಅವರಂತಹ ನಾಯಕರ ನೀರಾವರಿ ಕ್ರಾಂತಿಯನ್ನು ಅವರು ಈ ಸಂದರ್ಭದಲ್ಲಿ ಸ್ಮರಿಸಿದರು.

ಭಾರತವು ವಿಶ್ವದ ಮೂರನೇ ಅತಿದೊಡ್ಡ ಅಣೆಕಟ್ಟು ಹೊಂದಿರುವ ದೇಶವಾಗಿದ್ದು (6,628 ಅಣೆಕಟ್ಟುಗಳು), ಕರ್ನಾಟಕವು 231 ಅಣೆಕಟ್ಟುಗಳೊಂದಿಗೆ ದೇಶದಲ್ಲೇ ಆರನೇ ಸ್ಥಾನದಲ್ಲಿದೆ. ನಮ್ಮ ದೇಶದ ಶೇ. 70 ರಷ್ಟು ಅಣೆಕಟ್ಟುಗಳು 25 ವರ್ಷಗಳಿಗಿಂತ ಹಳೆಯದಾಗಿವೆ. ಹವಾಮಾನ ಬದಲಾವಣೆಯಿಂದ ಉಂಟಾಗುವ ಹಠಾತ್ ಪ್ರವಾಹ, ಭೂಕಂಪನ ಭೀತಿ ಮತ್ತು ಹೂಳು ತುಂಬುವಿಕೆಯಂತಹ ಸವಾಲುಗಳನ್ನು ಎದುರಿಸಲು ಅಣೆಕಟ್ಟುಗಳ ಸುರಕ್ಷತೆಯನ್ನು 'ರಾಷ್ಟ್ರೀಯ ಭದ್ರತೆ'ಯ ಭಾಗವಾಗಿ ಪರಿಗಣಿಸುವುದು ಅನಿವಾರ್ಯ ಎಂದು ಅವರು ಒತ್ತಿ ಹೇಳಿದರು.

ತಂತ್ರಜ್ಞಾನ ಮತ್ತು ಸೈಬರ್ ಭದ್ರತೆ: ಅಣೆಕಟ್ಟುಗಳು ಡಿಜಿಟಲ್ ರೂಪದಲ್ಲಿ ಕಾರ್ಯಾಚರಣೆಗೊಳ್ಳುತ್ತಿರುವ ಇಂದಿನ ಕಾಲದಲ್ಲಿ, ತಾಂತ್ರಿಕ ವಿಧ್ವಂಸಕ ಕೃತ್ಯಗಳು ಮತ್ತು ಸೈಬರ್ ದಾಳಿಗಳಿಂದ ಅಣೆಕಟ್ಟುಗಳನ್ನು ರಕ್ಷಿಸುವುದು ಅತ್ಯಂತ ಮುಖ್ಯವಾಗಿದೆ. ರಾಷ್ಟ್ರೀಯ ಮೂಲಸೌಕರ್ಯ ಭದ್ರತೆಯ ಭಾಗವಾಗಿ ಸೈಬರ್ ಸುರಕ್ಷತೆಯನ್ನು ಅನುಸರಿಸಬೇಕು ಎಂದು ತಿಳಿಸಿದರು.

ನೀರು ಮತ್ತು ಅಣೆಕಟ್ಟುಗಳ ಸುರಕ್ಷತೆಗೆ ರಾಜಕೀಯ ಗಡಿಗಳಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 'ಸಹಕಾರ ಸಂಯುಕ್ತ' ವ್ಯವಸ್ಥೆಯಡಿ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಹೇಳಿದರು.ತುರ್ತು ಕ್ರಿಯಾ ಯೋಜನೆ: ಅಣೆಕಟ್ಟುಗಳ ಸುರಕ್ಷತಾ ತಪಾಸಣೆ ಮತ್ತು ತುರ್ತು ಕ್ರಿಯಾ ಯೋಜನೆಗಳು ಕೇವಲ ಔಪಚಾರಿಕ ದಾಖಲೆಗಳಾಗದೆ, ಪ್ರಾಯೋಗಿಕವಾಗಿ ಜಾರಿಯಲ್ಲಿರಬೇಕು.

ಬೃಹತ್ ಯೋಜನೆಗಳಿಂದ ಸ್ಥಳಾಂತರಗೊಳ್ಳುವ ಜನರ ಪುನರ್ವಸತಿ ಪ್ರಕ್ರಿಯೆಯು ಪಾರದರ್ಶಕ ಮತ್ತು ಮಾನವೀಯತೆಯಿಂದ ಕೂಡಿರಬೇಕು.

ಅಭಿವೃದ್ಧಿಯ ನಿಜವಾದ ಮಾಪನ ನಾವು ಎಷ್ಟು ಎತ್ತರದ ಅಣೆಕಟ್ಟು ಕಟ್ಟುತ್ತೇವೆ ಎಂಬುದರ ಮೇಲಲ್ಲ, ಬದಲಾಗಿ ನಾವು ಅದನ್ನು ಎಷ್ಟು ಸುರಕ್ಷಿತವಾಗಿ ನಿರ್ವಹಿಸುತ್ತೇವೆ ಎಂಬುದರ ಮೇಲೆ ನಿರ್ಧರಿತವಾಗುತ್ತದೆ ಎಂದು ತಿಳಿಸಿದರು.

# ಕ್ಷೇತ್ರದ ಜನರಿಗೆ ಕೊಟ್ಟ ಮಾತನ್ನು ನಡೆಸುತ್ತ ಬಂದಿದ್ದೇನೆ: ಕದಲೂರು ಉದಯ್



**ಕೆ.ಎಂ.ದೊಡ್ಡಿ:** ಕೊನೆ ಭಾಗದ ರೈತರ ಬೆಳಗಳಿಗೆ ನೀರಿನ ಬವಣೆ ತೀರಿಸಲು ನಾಲಾ ಆಧುನಿಕರಣ ಕಾಮಗಾರಿ ಕೈಗೆತ್ತಿ ಕೊಂಡು ಕ್ಷೇತ್ರದ ಜನರಿಗೆ ಕೊಟ್ಟ ಮಾತನ್ನು ನಡೆಸುತ್ತ ಬಂದಿದ್ದೇನೆ ಎಂದು ಶಾಸಕ ಕದಲೂರು ಉದಯ್ ತಿಳಿಸಿದರು.

ಸಮೀಪದ ಹೊನ್ನಾಯಕನಹಳ್ಳಿ ಗ್ರಾಮದ ಬಸವನಗೋರಿ ಬಳಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಸುಮಾರು 35 ಕೋಟಿ ವೆಚ್ಚದಲ್ಲಿ ಮದ್ದೂರು ತಾಲೂಕಿನ ಹೆಬ್ಬಕವಾಡಿ ಮುಖ್ಯನಾಲೆ,ವಿತರಣಾ ನಾಲೆಗಳು ಹಾಗೂ ಪಿಕಪ್ ನಾಲೆಗಳ ಆಧುನೀಕರಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಪ್ರತಿ ಬೆಳೆಗೂ ಕೊನೆ ಭಾಗದ ರೈತರು ನೀರಿಗಾಗಿ ಪರಿತಪಿಸುತ್ತ ಹೋರಾಟಗಳನ್ನು ಮಾಡುತ್ತ ಬಂದಿದ್ದರು ದಶಕಗಳಿಂದ ಕಡೆ ಭಾಗದ ರೈತರಿಗೆ ನೀರು ಗಗನ ಕುಸುಮವಾಗಿತ್ತು ಅದನ್ನು ಅರಿತು ಮುಖ್ಯ ನಾಲೆ ಸೇರಿದಂತೆ ವಿತರಣಾ ನಾಲಾ ಆಧುನೀಕರಣಗೊಳಿಸಿ ರೈತರ ಬೆಳೆಗಳಿಗೆ ಸರಗವಾಗಿ ನೀರು ಹರಿಸಲು ಕ್ರಮ ವಹಿಸಿದ್ದೇನೆ ಎಂದರು.

ನಾಲೆಗಳಿಗೆ ಹರಿಸಿದಾಗ ನೀರು ಪೋಲಾಗಿ ಕೊನೆಯ ಭಾಗಕ್ಕೆ ನೀರು ಸಿಗದೇ ರೈತರು ಕಂಗಾಲಿಗಿದ್ದು ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ 35 ಕೋಟಿ ವೆಚ್ಚದಲ್ಲಿ ನಾಲೆಗಳ ಆಧುನೀಕರಣ ವಿತರಣಾ ನಾಲೆಗಳು ಹಾಗೂ ಪಿಕಪ್ ನಾಲೆಗಳ ಅಭಿವೃದ್ಧಿಪಡಿಸಿ ಮುಂದೆ ತಾಲೂಕಿನ ರೈತರ ನೀರಾವರಿ ಸಮಸ್ಯೆಗಳು ಎದುರಾಗಿದಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮುಟ್ಟನಹಳ್ಳಿ ಬಳಿ ಇರುವ ಸೂಳೆಕೆರೆಯನ್ನು 300 ಎಕ್ಕರೆ ಒತ್ತುವರಿ ಮಾಡಿ ಕೊಂಡಿದ್ದು ಅದನ್ನು ತೆರವು ಗೊಳಿಸಲಾಗುತಿದ್ದು ಜತೆಗೆ ಕೆರೆ ಹೂಳೆತ್ತುವ ಕಾರ್ಯ ಕೂಡ ಆರಂಭವಾಗಿದ್ದು ದಿನ ನಿತ್ಯ ಇಟಾಚಿ, ಜೆಸಿಬಿಗಳ ಮೂಲಕ ಹೂಳು ತೆಗೆಸಿ ನೂರಾರು ಲಾರಿಗಳ ಮೂಲಕ ಹೂಳೆ ಮಣ್ಣನ್ನು ಸಾಗಿಸಿ ಕೆರೆಗೆ ಹೆಚ್ಚುವರಿ ನೀರು ಸಂಗ್ರಹಣೆಯಾಗಿ ಅಭಿವೃದ್ಧಿ ಪಡಿಸಿ ರೈತರಿಗೆ ನೀರಿನ ಸಮಸ್ಯೆ ಶಾಶ್ವತವಾಗಿ ಬಗೆ ಹರಿಸಿ ಎರಡು ಬೆಳೆಗಳಿಗೆ ನೀರು ದೊರಕುವಂತೆ ಮಾಡಲಾಗುತ್ತಿದೆ ಎಂದು ಭರವಸೆ ನೀಡಿದರು.

ಮದ್ದೂರು ಕ್ಷೇತ್ರದ ರೈತರ ಸಮಗ್ರ ಕಲ್ಯಾಣಕ್ಕಾಗಿ ಹಾಗೂ ನೀರಾವರಿ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದಿಂದ ಕಾವೇರಿ ನೀರಾವರಿ ನಿಗಮಕ್ಕೆ 600 ಕೋಟಿಗೂ ಹೆಚ್ಚಿನ ಅನುದಾನ ತಂದಿದ್ದು ಹೆಬ್ಬಕವಾಡಿ ನಾಲೆಗಳ ಅಭಿವೃದ್ಧಿಯಿಂದ ತಾಲೂಕಿನ ಸಬ್ಬನಹಳ್ಳಿ ಯಿಂದ ಎಸ್.ಐ ಹೊನ್ನಲಗೆರೆ ಗ್ರಾಮದ ಸುಮಾರು ಸಾವಿರಾರು ಎಕರೆ ಭೂಪ್ರದೇಶಗಳಿಗೆ ನೀರಿನ ಅನುಕೂಲ ದೊರೆಯಲಿದೆ ಎಂದರು.

ಕ್ಷೇತ್ರದ ಹಲವು ಗ್ರಾಮಗಳಲ್ಲಿ ಗ್ರಾಮ ಪರಿಮಿತಿ ರಸ್ತೆಗಳ ನಿರ್ಮಾಣಕ್ಕೆ ಸುಮಾರು 40 ಕೋಟಿ ವೆಚ್ಚದಲ್ಲಿ ಗ್ರಾಮ ಪರಿಮಿತಿ ರಸ್ತೆಗಳನ್ನು ಅಭಿವೃದ್ಧಿಗೆ ಶೀಘ್ರದಲ್ಲಿ ಚಾಲನೆ ದೊರೆಯಲಿದ್ದು ಉತ್ತಮ ರಸ್ತೆ ನಿರ್ಮಾಣಕ್ಕೆ ಕಾರ್ಯಯೋಜನೆ ರೂಪಿಸಲಾಗಿದೆ ಎಂದರು.

ನೀರಾವರಿ ಯೋಜನೆಗಳ ಅಭಿವೃದ್ಧಿಗೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಿಶೇಷ ಕಾಳಜಿ ವಹಿಸಿ ಮಂಡ್ಯ ಜಿಲ್ಲೆಗೆ ಹೆಚ್ಚಿನ ಅನುದಾನ ನೀಡಿದ್ದು ಅದರಲ್ಲಿ ವಿಶೇಷವಾಗಿ ಮದ್ದೂರು ತಾಲೂಕಿಗೆ ನೀಡಿದ್ದಾರೆ ಎಂದು ಶ್ಲಾಘೀಸಿದರು.

# ಮಕ್ಕಳ ಬಾಲ್ಯ ಹೇಗಿದ್ದರೆ ಚೆನ್ನ



ಪ್ರತಿಯೊಬ್ಬ ಮನುಷ್ಯನಿಗೂ ಕೂಡ ತನ್ನ ಬಾಲ್ಯದ ದಿನಗಳು ಅತಿ ಮುಖ್ಯವಾಗುತ್ತವೆ, ಅದು ಒಂದು ರೀತಿ ಒಂದು ಮನೆಗೆ ಬುನಾದಿ ಹೇಗೋ ಹಾಗೆ ಅನ್ನಬಹುದು.. ಬಾಲ್ಯ ಎಂದರೆ ಕೇವಲ ಸಿಹಿ ಅನುಭವಗಳು,ಸುಖದ ದಿನಗಳು, ಎಲ್ಲರಿಂದ ಪ್ರೀತಿ ಪಾತ್ರರಾಗುವುದು,, ಉತ್ತಮ ಓದು, ಅಂಕಗಳಿಸುವಿಕೆ,ಇಷ್ಟೇ ಅಲ್ಲ ಅದು ಸಿಹಿ ಕಹಿ ಎರಡರ ಸಮ್ಮಿಲನವಾಗಿರಬೇಕು ಏಕೆಂದರೆ ನಾವು ಚಿಕ್ಕವರಿದ್ದಾಗ ಏನು ಕಲಿಯುತ್ತೇವೆಯೋ ದೊಡ್ಡವರಾದ ಮೇಲೆ ಕೂಡ ಅದರ ಪರಿಣಾಮ ವಿರುತ್ತದೆ..

ಕೇವಲ ಸುಖವನ್ನ ಅಷ್ಟೇ ನೋಡಿ ಕೊಂಡು ಬೆಳೆದರೆ ಮುಂದೆ ಸಣ್ಣ ಪುಟ್ಟ ಕಷ್ಟಗಳಿಗೂ ಕೂಡ ತುಂಬಾ ದುಃಖ ಅನುಭವಿಸಬೇಕಾಗುತ್ತದೆ, ಮನೆಯಲ್ಲಿ ಕಷ್ಟ ಇದ್ದಾಗ ಅಪ್ಪ ಅಮ್ಮ ಅಥವಾ ಹಿರಿಯರು ಹೇಗೆ ಅದನ್ನು ನಿಭಾಯಿಸಿದರು ಎಂಬುದನ್ನು ನೋಡಿ ಬೆಳೆದರೆ ಮಾತ್ರ ತಾವು ಕೂಡ ಅಂತ ಸಂದರ್ಭವನ್ನು ನಿಭಾಯಿಸಬಲ್ಲರು ಮಕ್ಕಳು.

ಶಾಲೆಯಲ್ಲಿ ಕೂಡ ಮಕ್ಕಳ ಮೇಲಿನ ಓದುವ ಬಾರ ಸ್ವಲ್ಪ ಕಡಿಮೆಯಾಗಬೇಕು, ಸದಾ ಓದು ಬರಹ ಇಷ್ಟರಲ್ಲೇ ಇರದೇ ಅವರಿಗೆ ಆಸಕ್ತಿ ಇರುವ ವಿಷಯಗಳನ್ನು ತಿಳಿದು ಅದರ ಮೇಲೆ ಮುಂದೆ ಏನಾದರೂ ಮಾಡುವಂತ



ದಾರಿಯನ್ನು ತೋರಿಸುವಂತಹ ಕೋರ್ಸ್‌ಗಳು ಬರಬೇಕು ಹಾಗೂ ಅದರ ಮಾಹಿತಿಯನ್ನು ಯಾವಾಗಲೂ ತಿಳಿಸುತ್ತಿರಬೇಕು . ಮೊದಲಿನಂತೆ ಕೊಕ್ಕೋ, ಕಬಡ್ಡಿ,ಕ್ರಿಕೆಟ್ ಎಲ್ಲಾ ಆಟಗಳನ್ನು ಆಟದ ಮೈದಾನದಲ್ಲಿ ತುಂಬಾ ಸಮಯದವರೆಗೂ ಆಡುವಂತಹ, ಇಂಟರ್ನೆಟ್ ರಹಿತ ಪರಿಸ್ಥಿತಿ ಮರುಕಳಿಸಬೇಕು, ಓದುವುದು ತಪ್ಪಲ್ಲ ಹಾಗಂತ ಇನ್ನುಳಿದ ಸಾಂಸ್ಕೃತಿಕ ಅಥವಾ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗದೇ ಇರುವುದು ಮಾತ್ರ ತುಂಬಾ ತಪ್ಪು, ತಾವು ಚಿಕ್ಕವರಿದ್ದಾಗ ಕಲಿತ ರಂಗೋಲಿ, ಹಾಡುಗಳು, ಅಥವಾ ಡ್ರಾಯಿಂಗ್ ಮಾಡೋ ರೀತಿಯೋ, ಆಡಿದ ಆಟಗಳು, ಅಮ್ಮನಿಗೆ ಮಾಡಿದ ಚಿಕ್ಕ ಪುಟ್ಟ ಸಹಾಯ ಅಪ್ಪನೊಂದಿಗೆ ಬ್ಯಾಂಕಿಗೆ ಹೋದ ಅನುಭವ ಇವೆಲ್ಲವೂ ಸಣ್ಣ ವಿಚಾರಗಳ ಆದರೂ ಕೂಡ ಮಧುರ ಅನುಭವಗಳು. ಹೀಗೆ ಕಲಿತ ಹಾಡುಗಳು ಮುಂದೆ ಅವರ ಕಾಲೇಜಿನ ದಿನಗಳಲ್ಲಿ ಪ್ರಾರ್ಥನೆ ಹಾಡಲು ಅಥವಾ ರಂಗೋಲಿ ಹಾಕಲು ಉಪಯೋಗವಾಗುತ್ತದೆ .

ನಾವು ಚಿಕ್ಕವರಿದ್ದಾಗ ಮಣ್ಣಿನಲ್ಲಿ ಆಟ ಆಡುವಾಗ ಅದರಿಂದ ಬರುತ್ತಿದ್ದ ಸುವಾಸನೆಯು ಈಗ ಮಳೆ ಬಂದರೆ ನಮ್ಮ ಬಾಲ್ಯವನ್ನು ನೆನಪಿಸುತ್ತದೆ, ಬಿದ್ದಾಗ ಆಗಿದ್ದ ಗಾಯಗಳು, ಒಂದು ಅಥವಾ ಎರಡು ರೂಪಾಯಿ ಕೊಟ್ಟು,ಕೊಂಡು ತಿನ್ನುತ್ತಿದ್ದ ಹಣ್ಣುಗಳು, ಚಾಕ್ಲೇಟ್ಗಳು ಹುಣಸೆಹಣ್ಣಿನ ಕುಟ್ಟುಂಡಿ, ನಿಂಬೆಹುಳಿ ಪೆಪ್ಪರ್ ಮೆಂಟ್, ದಾರಿಯಲ್ಲಿ ಬರುತ್ತಿದ್ದ ಅಜ್ಜಿ ಕೂದಲು, ಹೀಗೆ ಎಲ್ಲವೂ ಚಿಕ್ಕ ಖುಷಿಗಳೇ ಆದರೆ ದೊಡ್ಡ ನೆನಪು. ಹೀಗೆ ಬೀದಿಯಲ್ಲಿ ಬೆಳೆದು,ದಾರಿಯಲ್ಲಿ ಬರುತ್ತಿದ್ದ ದಿನಸುಗಳನ್ನು ತಿಂದರೂ ಕೂಡ ನಮ್ಮ ರೋಗ ನಿರೋಧಕ ಶಕ್ತಿ ಜಾಸ್ತಿ ಇತ್ತು, ಈ ರೀತಿಯಾಗಿ ನಮ್ಮ ಮಕ್ಕಳು ಬೆಳೆದರೆ ಎಷ್ಟು ಸಂತೋಷ ಅಲ್ಲವೇ. ಆದರೆ ಈಗ ಯಾರನ್ನು ನಂಬದಂತಹ, ಗೊತ್ತಿರುವವರ ಮನೆಗೂ ಕೂಡ ಮಕ್ಕಳನ್ನು ಕಳಿಸದಂತಹ ಸ್ಥಿತಿ ಉಂಟಾಗಿದೆ..

ಮನೆಯಲ್ಲಿ ಅಪ್ಪ ಅಮ್ಮ ಕಷ್ಟ ಪಡುವುದನ್ನು ಮಕ್ಕಳಿಗೆ ತಿಳಿಸುವುದೇ ಬೇಡ ಅಂದುಕೊಳ್ಳುವುದು ಕೂಡ ನನ್ನ ಪ್ರಕಾರ ತಪ್ಪು ಅನಿಸುತ್ತದೆ, ಕಷ್ಟದ ಅನುಭವ ತಿಳಿಯದಿದ್ದರೆ ಅವರಿಗೆ ದುಡ್ಡಿನ ಬೆಲೆ ಗೊತ್ತಾಗುವುದಿಲ್ಲ, ಬೆಲೆ ಗೊತ್ತಿದ್ದರೆ ಖರ್ಚು ಮಾಡುವಾಗ ಹಿಡಿತವಿರುತ್ತದೆ. ಅವರ ಮೇಲಿರುವ ಗೌರವೂ ಕೂಡ ದುಪ್ಪಟ್ಟಾಗುತ್ತದೆ ಅವರ ಕಷ್ಟಪಡುವುದು ನಮಗಾಗಿ ಅಲ್ಲವೇ ಎನ್ನುವ ಪ್ರೀತಿ ಹೆಚ್ಚುತ್ತೆ,ಜವಾಬ್ದಾರಿ ಕೂಡ ಇರುತ್ತದೆ. ಜೀವನವು ಯಾಂತ್ರಿಕವಾಗದೆ ಮಕ್ಕಳು ಕೂಡ ತಮ್ಮ ಜೀವನವನ್ನು ಜೀವಿಸುವಂತೆ ಇರಲಿ, ಹಾಡು ಕುಣಿತ ಮಕ್ಕಳೊಂದಿಗೆ ಜಗಳ ಮತ್ತೆ ಒಂದಾಗುವಿಕೆ .. ಹೀಗೆ ಪ್ರತಿಯೊಂದನ್ನು ಮಕ್ಕಳು ಸಂತೋಷದಿಂದ ಅನುಭವಿಸಬೇಕು.



ನಂದಿನಿ ವಿವೇಕ್. ಹೊಸದುರ್ಗ..

# ವಿದ್ಯುತ್ ಅವಘಡಗಳ ಪ್ರಮಾಣ ಶೂನ್ಯಕ್ಕೆ ತರುವ ಗುರಿ ಇರಲಿ: ರಮೇಶ್ ಬಂಡಿಸಿದ್ದೇಗೌಡ




**ಮೈಸೂರು:** ವಿದ್ಯುತ್ ಅವಘಡಗಳ ಪ್ರಮಾಣ ತಪ್ಪಿಸಿ ಅದನ್ನು ಶೂನ್ಯಕ್ಕೆ ಇಳಿಸುವುದು ಅತ್ಯಂತ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಸೆಸ್ಕ್ ವ್ಯಾಪ್ತಿಯ ಪ್ರತಿಯೊಬ್ಬ ಪವರ್ ಮ್ಯಾನ್‌ಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ(659) ಮೈಸೂರು ವಿಭಾಗದ ವತಿಯಿಂದ ರಾಜೇಂದ್ರನಗರದ ಕವಿಪ್ರನಿ ನೌಕರರ ಸಮುದಾಯದ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ವಸತಿಗೃಹ ಶಂಕುಸ್ಥಾಪನೆ, ನವೀಕೃತ ಸಮುದಾಯ ಭವನ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

"ವಿದ್ಯುತ್ ಅವಘಡಗಳಿಂದ ಜೀವಹಾನಿ, ಆಸ್ತಿ ನಷ್ಟದ ಜೊತೆಗೆ ಮೃತರ ಕುಟುಂಬದ ಸಂಕಷ್ಟಕ್ಕೆ ಕಾರಣವಾಗಲಿದೆ. ಆದ್ದರಿಂದ ಪವರ್ ಮ್ಯಾನ್‌ಗಳು ಕೆಲಸ ಮಾಡುವಾಗ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಕಾರ್ಯನಿರ್ವಹಿಸಬೇಕಿದೆ. ಇದರಿಂದ ವಿದ್ಯುತ್ ಅವಘಡಗಳ ಪ್ರಮಾಣ ತಗ್ಗಿಸಬಹುದಾಗಿದ್ದು, ಬಹುಮುಖ್ಯವಾಗಿ ಸೆಸ್ಕ್ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡಗಳ ಪ್ರಮಾಣವನ್ನು ಶೂನ್ಯಕ್ಕೆ ತರುವ ಗುರಿ ಸಾಧಿಸಬಹುದು" ಎಂದರು.

"ಯಾವುದೇ ಸಂಸ್ಥೆಯ ಪ್ರಗತಿ ಕೇವಲ ಒಬ್ಬರಿಂದ ಸಾಧ್ಯವಿಲ್ಲ. ಎಲ್ಲರೂ ಪರಿಸ್ಪರ ಸಹಕಾರ ಮನೋಭಾವದಿಂದ ಕೈಜೋಡಿಸಿ, ಕಾರ್ಯನಿರ್ವಹಿಸಿದರೆ ಮಾತ್ರ ಸಂಸ್ಥೆ ಪ್ರಗತಿ ಸಾಧಿಸಲಿದೆ. ಸೆಸ್ಕ್ ಸದಾಕಾಲ ಸಿಬ್ಬಂದಿಯೊಂದಿಗೆ ಇರಲಿದ್ದು, ಸಂಸ್ಥೆಯ ಉಳಿವು ಹಾಗೂ ಗ್ರಾಹಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು" ಎಂದು ಕರೆ ನೀಡಿದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಮಾತನಾಡಿ, "ಪವರ್ ಮ್ಯಾನ್‌ಗಳು ನಮ್ಮ ಸಂಸ್ಥೆಯ ಶಕ್ತಿಯಾಗಿದ್ದು, ಯೋಧರಂತೆ 24 ಗಂಟೆಗಳು ತಮ್ಮ ಪ್ರಾಣವನ್ನು ಲೆಕ್ಕಿಸದೆ ಕೆಲಸ ಮಾಡುವುದರಿಂದ ಸಂಸ್ಥೆಗೆ ಒಳ್ಳೆಯ ಹೆಸರು ಬರಲು ಕಾರಣವಾಗಿದೆ. ಹೀಗಾಗಿ ಪವರ್ ಮ್ಯಾನ್‌ಗಳು ಹಾಗೂ ಅವರ ಕುಟುಂಬಕ್ಕೆ ನೆರವಾಗಲು ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ನೀಡಲಾಗಿದೆ. ಪವರ್ ಮ್ಯಾನ್‌ಗಳ ಸುರಕ್ಷತೆ ದೃಷ್ಟಿಯಿಂದ ಸುರಕ್ಷಿತಾ ಕಿಟ್‌ಗಳನ್ನು ವಿತರಣೆ ಮಾಡಲಾಗಿದೆ. ಆದ್ದರಿಂದ ವಿದ್ಯುತ್ ಅಪಘಾತಗಳನ್ನು ತಪ್ಪಿಸುವತ್ತ ನಿಗಾವಹಿಸಬೇಕಿದ್ದು, ಇದಕ್ಕಾಗಿ ಹೆಚ್ಚಿನ ನಿರ್ವಹಣೆ ಮಾಡುವ ಮೂಲಕ ವಿದ್ಯುತ್ ಅಪಘಾತ ಆಗದಂತೆ ಕ್ರಮವಹಿಸಬೇಕಿದೆ" ಎಂದರು.

# ಸರಕಾರದ ಉಚಿತ ಸೌಲಭ್ಯದಡಿ ಮರೆಯಾದ ಅಗತ್ಯಗಳು



| ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

ಹೊಸ ಸರಕಾರಗಳು ಬಂದಂತೆ ಹೊಸ ಹೊಸ ಯೋಜನೆಗಳು. ಯಾವದು ಉಚಿತವಾಗಿ ಸಿಗುತ್ತದೆ ನಮಗೆ ಎಂದೆಲ್ಲ ಜಿಜ್ಞಾಸಗಳು. ಉಚಿತವಾಗಿ ಸಿಕ್ಕಷ್ಟು ತುಂಬಾ ಖುಷಿ. ಈಗ ಸರಕಾರ ಹಲವು ಯೋಜನೆಗಳನ್ನು ಉಚಿತವಾಗಿ ನೀಡುತ್ತದೆ. ಉಚಿತವಾಗಿ ಕೊಟ್ಟಷ್ಟು ಸರ್ಕಾರದ ಜನಪ್ರಿಯತೆ ಹೆಚ್ಚುತ್ತದೆ. ... ಅದಲ್ಲದೆ ತಿಂಗಳಿಗೆ ಎರಡು ಸಾವಿರ ರೂಪಾಯಿಯನ್ನು ಕೂಡ ಉಚಿತವಾಗಿ ಕೊಡುತ್ತದೆ ಸರ್ಕಾರ

ಹಾಗಾದರೆ ನಿಜವಾಗಿಯೂ ಉಚಿತವಾಗಿ ಸಿಕ್ಕಷ್ಟು ಉತ್ತಮ ರಾಜ್ಯವೇ!? ಅಲ್ಲದಿದ್ದರೆ ಯಾವದು ಉಚಿತವಾಗಿ ಸಿಗಬೇಕು.

ಉಚಿತ ಆಹಾರ,ಉಚಿತ ಸಾರಿಗೆ ಉಚಿತ ವಿದ್ಯುತ್ ಇವೆಲ್ಲವನ್ನು ದಶಕಗಳಿಂದ ನೀಡುತ್ತಿದ್ದರೂ ಯಾಕೆ ಸಮಾಜದಲ್ಲಿ ಅಷ್ಟು ಗಮನಾರ್ಹ ಸುಧಾರಣೆ ಮತ್ತು ಬೆಳವಣಿಗೆಗಳು ಆಗಿಲ್ಲ. ಮಹಿಳಾ ಬಸ್ ಪ್ರವಾಸಗಳನ್ನು ಉಚಿತವಾಗಿ ನೀಡುವ ಸರ್ಕಾರ ಮಹಿಳಾ ಮತ್ತು ಮಕ್ಕಳ, ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಎಷ್ಟು ಕ್ರಮಗಳನ್ನು ಕೈಗೊಂಡಿದೆ!? ಸಮಾಜದಲ್ಲಿ ಸುರಕ್ಷಿತವಾಗಿ ಬದುಕುವ ಹಕ್ಕು ಎಲ್ಲರಿಗೂ ಇದೆ ಅಲ್ಲವೇ!? ಆದರೂ ಪ್ರತಿ ವರ್ಷ ಸಾವಿರಾರು ಹೆಣ್ಣು ಮಕ್ಕಳು ಅಪಹರಣವಾಗುತ್ತಾರೆ . ಅವರ ಮೇಲೆ ಅತ್ಯಾಚಾರ ಆಗುತ್ತವೆ.ದೈಹಿಕ ಮತ್ತು ಮಾನಸಿಕ ಹಿಂಸೆ ಮಹಿಳೆಯರಿಗೆ ಮನೆಯಲ್ಲೂ ಕೂಡ ಸತತವಾಗಿ ನಡೆಯುತ್ತಲೇ ಇರುತ್ತದೆ. ಕೆಲವು ದಿನಗಳ ಹಿಂದೆ ಅಷ್ಟೇ , ಬಾದಾಮಿಯ ಜಾತ್ರೆಯಲ್ಲಿ ಬಲೂನ್ ಮಾರಲು ಬಂದ ಹತ್ತು ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಮಾಡಿ ಕೊಲೆಗೈದಿದ್ದರಲ್ಲವೇ!? ಮತ್ತೆ ಆಹಾರ ದುಡ್ಡು ಎಲ್ಲವು ಉಚಿತವಾಗಿ ಸಿಗುತ್ತಿದ್ದರೂ ಈ ರೀತಿ ಊರಿಂದ ಊರಿಗೆ ಜನ ಭಿಕ್ಷೆ ಬೇಡುತ್ತಾ ಸುರಕ್ಷತೆ ಇಲ್ಲದೆ ಸಾಗುವದಾದರೂ ಏಕೆ ?

ಇನ್ನಷ್ಟು ಆಳವಾಗಿ ಯೋಚಿಸಿದರೆ ಎಷ್ಟೊಂದು ಶಾಲೆಗಳಲ್ಲಿ ಕಾಲೇಜುಗಳಲ್ಲಿ ಕಚೇರಿಗಳಲ್ಲಿ ಈಗಲೂ ಕೂಡ ಲೈಂಗಿಕ ದೌರ್ಜನ್ಯ ನಡೆಯುತ್ತದೆ. ಎಷ್ಟೋ ಎನ್ಜಿಓ ಸಂಸ್ಥೆಗಳು ವೇಷ್ಯಾವಾಟಿಕೆ ಪ್ರದೇಶಗಳಿಗೆ ಹೋಗಿ ಅವರು ಅನುಭವಿಸುತ್ತಿರುವ ಸಂಕಟ ತಲ್ಲಣ ಮತ್ತು ಕೆಳಮಟ್ಟದ ಜೀವನವನ್ನು ಸೆರೆಹಿಡಿದು ವಿಡಿಯೋಗಳ ಮೂಲಕ ತೋರಿಸುತ್ತಾರೆ. ಅದೆಲ್ಲ ಸರ್ಕಾರಕ್ಕೆ ಕಾಣುತ್ತೇಲೇ ಇಲ್ಲವೇ!? ಕಾನೂನು ಕೇವಲ ಪುಸ್ತಕದಲ್ಲಿ ಇದೆಯಾ!?. ಶೋಷಿತರ ಪರವಾಗಿ ಬೆಂಬಲ ನೀಡದೇ, ಪೋಲಿಸರೇ ಕೆಲವು ಕಡೆ ಲಂಚಪಡೆದು ಅಪರಾಧಗಳು ನಿರಾತಂಕವಾಗಿ ಸಾಗುತಿವೆ. ಮಹಿಳೆಯರು ಒಂದೆಡೆ ಆದರೆ ಸಣ್ಣ ಮಕ್ಕಳನ್ನು ಕೂಡ ಬಿಡದೆ ಬಿಕ್ಷಾಟನೆ ಮತ್ತು ವೇಶ್ಯಾವೃತ್ತಿಗೆ ದೊಡುತ್ತಾರೆ. ಪಾಪ ಮಕ್ಕಳು ಆ ಪರಿಸ್ಥಿತಿಯಲ್ಲಿದ್ದಾಗ ಏನು ಮಾಡಬೇಕು ಕೊನೆಯ ಪಕ್ಷ ಪ್ರೌಢರಾದರೆ ತನ್ನ ನೋವು ಮತ್ತು ಸಂಕಟಗಳಿಗೆ ಒಂದು ಅಂತ್ಯವನ್ನು ಹಾಡಲು ಆತ್ಮಹತ್ಯೆ ಮಾಡಿಕೊಳ್ಳಲಾದರು ಬಹುದು, ಮಕ್ಕಳಿಗೆ ಈ ಎಲ್ಲ ಪರಿಸ್ಥಿತಿಗಳ ಅರಿವು ಇರುವುದಿಲ್ಲ. ಅದರಿಂದ ಹೊರಬರುವ ದಾರಿಯೂ ಗೊತ್ತಿರುವುದಿಲ್ಲ. ಕೊಡುವ ಹಿಂಸೆಗಳನ್ನು ಗತಿಯಿಲ್ಲದೆ ತಡೆದುಕೊಂಡು ಬಿಕ್ಕುತ್ತಲೇ ಇರುವ ಸಣ್ಣ ಕೋಣೆಯಲ್ಲಿ ಬಾಲ್ಯವನ್ನು ಕಳೆಯುತ್ತವೆ. ಇಂತಹ ಹಲವಾರು ಪ್ರಕರಣಗಳನ್ನು ಹಲವಾರು ಜನ ವಿಡಿಯೋ ಮಾಡಿ ಸಾಮಾಜಿಕ ಜಾಲ್ ತಾಣಗಳಲ್ಲಿ ರೀಲ್ಸ ಮೂಲಕ ಬಿಡುತ್ತಾರೆ. ಮತ್ತೇಕೆ ಸರಕಾರ ಅಲ್ಲಿ ಹೋಗಿ ಕ್ರಮವನ್ನು ಏಕೆ ಕೈಗೊಳ್ಳುವುದಿಲ್ಲ!? ನಿರ್ಭಯವಾಗಿ ಮತ್ತು ಸುರಕ್ಷಿತವಾಗಿರುವ ಬದುಕು ಎಲ್ಲರಿಗೂ ಸಿಗಬೇಕಲ್ಲವೇ.

**ಶಿಕ್ಷಣ: ಉಚಿತವೋ? ಗುಣಮಟ್ಟವೋ?**

ಸರಕಾರಿ ಶಾಲೆಗಳಲ್ಲಿ ಉಚಿತ ಪುಸ್ತಕ, ಮಧ್ಯಾಹ್ನ ಊಟ, ಉಡುಪು?ಹಾಲು, ಮೊಟ್ಟೆ ಸಿಗುತ್ತವೆ. ಆದರೂ ಅನೇಕ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಕಾರಣ ಗುಣಮಟ್ಟದ ಬಗ್ಗೆ ವಿಶ್ವಾಸದ ಕೊರತೆ. ಇಂಗ್ಲಿಷ್ ಮಾಧ್ಯಮದ ಆಕರ್ಷಣೆ ಮತ್ತು ತಂತ್ರಜ್ಞಾನ ಬಳಕೆ ಹೆಚ್ಚಿರುವುದು ಮತ್ತೊಂದು ಕಾರಣ.


ಉಚಿತ ಶಿಕ್ಷಣ ನೀಡುವುದಕ್ಕಿಂತ ಗುಣಮಟ್ಟದ ಶಿಕ್ಷಣ ನೀಡುವುದು ಅತ್ಯಾವಶ್ಯಕ. ಆವಿಷ್ಕಾರಗಳನ್ನು ಮೊಬೈಲ್, ಲೈಟು,ರಸ್ತೆ,ವಾಹನಗಳು, ಇಂಟರ್ನೆಟ್ ಇವನ್ನೆಲ್ಲವನ್ನು ಒಪ್ಪಿಕೊಂಡು ಬದುಕುವ ನಾವು ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಯಾಕೆ ಒಪ್ಪುತ್ತಿಲ್ಲ!? ಆಂಗ್ಲ ಮಾಧ್ಯಮದ ಶಾಲೆಗಳು ಯಾಕೆ ಸರ್ಕಾರ ತೆಗೆಯಬೇಕು ಎಂಬ ಯೋಚನೆ ಇಲ್ಲ.

ಮೊದಲೆಲ್ಲಾ ಬಡವರಿಗೆ ಸಂಪತ್ತು ಇರದಿದ್ದರೂ ಆರೋಗ್ಯ ಭಾಗ್ಯ ವಿಪುಲವಾಗಿ ಇರುತ್ತಿತ್ತು.

ಕೆಲವು ದಶಕಗಳ ಹಿಂದೆ ಆಹಾರದ ಕೊರತೆ ಇತ್ತು. ಸಾಂಪ್ರದಾಯಿಕ ಮತ್ತು ಸಾವಯವ ಕೃಷಿಯನ್ನು ರೈತ ಅವಲಂಬಿಸಿದ್ದ ಹಿತವಾಗಿ ಬೆಳೆಯುತ್ತಿದ್ದ ಮಿತವಾಗಿ ತಿನ್ನುತ್ತಿದ್ದ. ಆದರೆ ಇಂದು ರಾಸಾಯನಿಕ ಬಳಕೆ ಮತ್ತು ಹೈಬ್ರಿಡ್ ಬೀಜಗಳಿಂದ ಬೆಳೆಯ ವಿಪುಲವಾಗಿದೆ ಅತಿಯಾದ ಕ್ರಿಮಿನಾಶಕಗಳ ಬಳಕೆಯಿಂದ ಬೆಳೆ ಹಾನಿ ಕೂಡ ತಡೆಗಟ್ಟಲಾಗಿದೆ.ಆದರೆ ಆಹಾರ ಮತ್ತು ಆರೋಗ್ಯದ ಗುಣಮಟ್ಟ ಕುಸಿದಿದೆ. ಯಾವ ಆಹಾರ ನೋಡಿದರೂ ಕಲಬೆರಿಕೆ. ಹಿಂದೆ ಒಂದು ಕಾಲವಿತ್ತು ಹಬ್ಬಗಳ ದಿನಗಳಲ್ಲಿ ಮಾತ್ರ ಸಿಹಿ ಊಟ,ಕರಿದ ತಿಂಡಿ ತಿನಿಸುಗಳನ್ನ ತಯಾರಿಸುತ್ತಿದ್ದರು . ಆದರೆ ಈಗ ಹೆಚ್ಚುವರಿ ಸಕ್ಕರೆ ಕಾರ್ಖಾನೆಗಳು ಮತ್ತು ಪರಿಷ್ಕೃತ ಸಂಸ್ಕರಿಸಿದ ಎಣ್ಣೆಅಗ್ಗದಬೆಲೆಗೆ ವಿಪುಲ ಪ್ರಮಾಣದಲ್ಲಿ ದೊರೆಯಲು ಆರಂಭಿಸಿದ ಮೇಲೆ ಎಲ್ಲೆಂದರಲ್ಲಿ ಬೇಕರಿ , ತಿಂಡಿ ಮನೆಗಳು ಆಹಾರ ಕೇಂದ್ರಗಳು ಸ್ಥಾಪನೆಯಾಗಿ ಎಲ್ಲಾ ತಿಂಡಿಗಳು ಎಲ್ಲಾ ಕಾಲದಲ್ಲಿ ತಿನ್ನಲು ಸಿಗುವಂತಾಗಿದೆ. ಆದರೆ ಮನುಷ್ಯ ಅಕ್ರಮವಾಗಿ ತಿಂದು,ತಿಂದು...ಮನುಷ್ಯ ರೋಗಗಳ ಗಣಿಯಾಗಿದ್ದಾನೆ. ಸಕ್ಕರೆ ಕಾಯಿಲೆ ಯಾರಿಗೋ ಒಬ್ಬರಿಗೆ ಇರುತ್ತಿತ್ತು ಭಾರತದಲ್ಲಿ! ಈಗ ಪ್ರತಿ ಮೂರಲ್ಲಿ ಒಬ್ಬರಿಗೆ ಸಕ್ಕರೆ ಕಾಯಿಲೆ ಇದೆ. ಈ ಕಾಯಿಲೆ ಮಕ್ಕಳಲ್ಲಿ ಕೂಡ ವಿಪರೀತವಾಗಿ ಹೆಚ್ಚುತ್ತಿದೆ. ಕೆಲವು ಆಹಾರ ಪದಾರ್ಥಗಳ ತಿನ್ನುವುದರಿಂದ ಅಕಾಲಿಕ ಮತ್ತು ಅಸಹಜ ರೋಗ ಮತ್ತು ಸಾವು ನೋವುಗಳು ಸಂಭವಿಸುತ್ತಿವೆ. ಯಾವ ಪಾಕೆಟ್ ಆಹಾರಗಳು ಮತ್ತು ಕೃತಕ ಬಣ್ಣಗಳಿಂದ ಕೂಡಿದ ಪೇಯ ಪಾನೀಯಗಳು ಆರೋಗ್ಯಕ್ಕೆ ಹಾನಿಕರವೋ ಅಂತ ಪೇಯ ರಾಜಾರೋಶವಾಗಿ ಜಾಹೀರಾತು ಮಾಡಿಕೊಂಡು ತಿರುಗುತ್ತಿವೆ. ಕ್ಯಾನ್ಸರ್ ನಂತಹ ಮಾರಣಾಂತಿಕ ಕಾಯಿಲೆಗಳು ಹುಟ್ಟಿದ ಮಗುವಿನಿಂದ ಹಿಡಿದು ಎಲ್ಲರಿಗೂ ಬರುತ್ತಿವೆ.

ನಾವು ಮಕ್ಕಳಿಗೆ ಗಳಿಸುವ ನಿಜವಾದ ಸಂಪತ್ತು ಎಂದರೆ ಏನು ? ದುಡ್ಡು , ಬಂಗಾರ ಮನೆ ಕಾರು ಆಸ್ತಿ ಇವೆಲ್ಲ ನಿಜವಾದ ಸಂಪತ್ತೇ!? ಇವೆಲ್ಲವನ್ನು ಕೂಡಿಟ್ಟರು ಮಕ್ಕಳಿಗೆ ಬದುಕಲು ಬೇಕಾಗಿರುವ ವಿಷಮುಕ್ತ ಆಹಾರ ಶುದ್ಧವಾದ ಗಾಳಿ ಇರದಿದ್ದರೆ ವಿಷವನ್ನುಂಡು ಎಷ್ಟು ದಿನ ಮಕ್ಕಳು ಸಂಪತ್ತನ್ನು ಅನುಭೋಗಿಸಿಯಾರು!? ಆರೋಗ್ಯ ಭಾಗ್ಯವಿಲ್ಲದೊಡೆ ಯಾವ ಭಾಗ್ಯ ಇದ್ದರೆಷ್ಟು ಬಿಟ್ಟರೆಷ್ಟು. ನೀವು ಸ್ಪೀಡ್ ಲಿಮಿಟ್ ಅನ್ನು ದಾಟಿ ವಾಹನ ಓಡಿಸಿದರೆ ಕ್ಯಾಮರಾ ಮೂಲಕ ನಿಮ್ಮ ತಪ್ಪನ್ನು ಗಮನಿಸಿ ದಂಡದಪ್ರತಿ ನಿಮ್ಮ ಮನೆಗೆ ಬರುತ್ತದೆ. ಅಂತಹ ವ್ಯವಸ್ಥೆ ಸರ್ಕಾರದಲ್ಲಿದೆ ಆದರೆ ತಿನ್ನುವ ಅನ್ನದಲ್ಲಿ ವಿಷವನ್ನು ಬೆರೆಸಿ ಮಾರುತ್ತಾರೆ . ರಾಸಾಯನಿಕ ಬಣ್ಣಗಳ ಉಪಯೋಗ, ಅತಿಯಾದ ಕ್ರಿಮಿನಾಶಕ ಮತ್ತು ರಾಸಾಯನಿಕ ರಸಗೊಬ್ಬರು ಮಾರಾಟ ಮಾಡುವರನ್ನು ಹಿಡಿದು ಸರ್ಕಾರ ಕ್ರಮ ಕೈಗೊಳ್ಳಲು ಆಗುವುದಿಲ್ಲವೇ!? ಇದಕ್ಕಾಗಿ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬಹುದಲ್ಲವೇ!

ಉಚಿತವಾಗಿ ಕೊಡಬೇಕಾಗಿರುವುದರಕ್ಕಿಂತ ಯೋಗ್ಯವಾದನ್ನು ಕೊಡಬೇಕಾಗಿದ್ದು ಅವಶ್ಯಕ..



ಕೆಲವು ದಶಕಗಳ ಹಿಂದೆ ಆಕಳು ಎಮ್ಮೆಗಳು ಹಿಂಡು ಹಿಂಡಾಗಿ ಮೇಯುವದನು ನೋಡಬಹುದಿತ್ತು. ಆದರೆ ಈಗ ಜಾನುವಾರುಗಳ ಸಾಕಾಣಿಕೆಯ ಸಂಖ್ಯೆ ಕಡಿಮೆಯಾಗಿದೆ ಆದರೂ ಹಾಲಿನ ಉತ್ಪಾದನೆ ಮಾತ್ರ ವಿಪುಲ ಪ್ರಮಾಣದಲ್ಲಿ ಆಗಿದೆ ಅದು ಹೇಗೆ!? ಪ್ರಾಣಿಗಳಿಗೆ ಮೇಯಲು ಜಾಗವಿಲ್ಲ ಸಂಖ್ಯೆ ಕ್ಷೀಣಿಸಿದರು ಹಾಲಿನ ಉತ್ಪಾದನೆ ಆಗುತ್ತಿದೆಯಾ!? ಕುಡಿಯುವ ಹಾಲನ್ನು ಕೂಡ ರಾಸಾಯನಿಕಗಳಿಂದ ಕೃತಕವಾಗಿ ತಯಾರಿಸುತ್ತಾರೆ. ಆ ಪ್ರಾಣಿಗೆ ಹೆಚ್ಚೆಚ್ಚು ಹಾಲು ನೀಡಲೆಂದುಸ ಇಂಜೆಕ್ಷನ್ಗಳನ್ನ ಕೊಡುತ್ತಾರೆ ಅಂತಹ ಹಾಲನ್ನು ಬಳಸಿದ ಮಕ್ಕಳು, ಹೆಣ್ಣುತನದ ಅರಿವು ಬರುವ ಮುನ್ನವೇ ಪುಷ್ಪವತಿಯಾಗುತ್ತಿದ್ದಾರೆ. ಮಾನಸಿಕ ಖಿನ್ನತೆ ಮತ್ತು ಕೂದಲು ಉದುರುವಂತಹ ಸಮಸ್ಯೆಗಳಿಗೆ ಇದು ಒಂದು ಮೂಲ ಕಾರಣ.

ಶಿಕ್ಷಣಕ್ಕಾಗಿ ಉದ್ಯೋಗಕ್ಕಾಗಿ ಮಕ್ಕಳು ಮನೆಯವರು ಪರಸ್ಥಳಗಳಲ್ಲಿ ಇರುವುದು ಅವಶ್ಯಕವಾಗಿರುತ್ತದೆ.ಆಗ ಮನೆಯ ಆಹಾರವನ್ನೇ ಅವಲಂಬಿಸುವದು ಸಾಧ್ಯವೇ!? ಮಕ್ಕಳು ಓದುವುದನ್ನು ಬಿಟ್ಟು ಅಡುಗೆ ಮಾಡಿಕೊಳ್ಳುತ್ತಾ ಕುಳಿತುಕೊಳ್ಳಬೇಕೆ!? ಮಹಿಳೆಯರು ಮತ್ತು ಪುರುಷರು ಮನೆಯಿಂದ ಬೇರೆ ಕಡೆ ವರ್ಗವಾದಾಗ ಅಡಿಗೆ ಮಾಡಬೇಕಾ ಅಥವಾ ಕೆಲಸಕ್ಕೆ ಹೋಗಬೇಕಾ!?

ಇಂತಹ ಸಂದರ್ಭಗಳಲ್ಲಿ ಹೋಟೆಲ್ ಮತ್ತು ಹೊರಗಿನ ತಿಂಡಿಗಳು ಅವಶ್ಯಕ ಅಲ್ಲವೇ!?ಆದರೆ ಆರೋಗ್ಯ ಇಲಾಖೆಯ ಮಾನದಂಡವನ್ನು ಮೀರಿ ರಾಸಾಯನಿಕಗಳನ್ನು ಬಳಸಿ ಕಲಬೆರಿಕೆಯ ವಿಷ ವನ್ನು ಅಂಗಡಿಗಳು ಮಾರಾಟ ಮಾಡುತ್ತವೆ. ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೇ!? ಕಾನೂನಿನ ಭಯ ಇರದೆ ಇರುವುದಕ್ಕೆ ಇಂತಹ ಅವ್ಯವಹಾರಗಳು ಆಗುತ್ತಿಲ್ಲವೇ.

ರಾಜಕೀಯ ಪಕ್ಷದವರು ಓಟು ಕೇಳಲು ಬಂದಾಗ ಜಾತಿ, ಪಂಥ,ಮೀಸಲಾತಿ, ಉತ್ತಮ ರಸ್ತೆ, ಕಟ್ಟಡ ವಿದ್ಯುತ್ತಗಳ ಬೇಡಿಕೆ ನೀಡುವರು ನಿಜವಾದ ಸಂಪತ್ತಿನ ಬಗ್ಗೆ ಎಂದಾದರೂ ನಾವು ಪ್ರಶ್ನಿಸಿದ್ದೇವಾ!?

**ನಿಜವಾಗಿಯೂ ಉಚಿತವಾಗಿ ಯಾವದು ಸಿಗಬೇಕು.**

* ಶುದ್ಧ ಗಾಳಿ
* ವಿಷಮುಕ್ತ ಆಹಾರ
* ಉಚಿತ ಆರೋಗ್ಯ ತಪಾಸಣೆ ಮತ್ತು ರೋಗಗಳಿಗೆ ಉಪಚಾರ
* ಉಚಿತ ಸಮಾನ ಶಿಕ್ಷಣ ವ್ಯವಸ್ಥೆ
* ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆ.
* ಸಾಮಾಜಿಕ ಸಾಂತ್ವನ ಮತ್ತು ಭದ್ರತೆ.

**ಅಭಿವೃದ್ಧಿಯ ಅರ್ಥವೇನು?**

**ಉಚಿತ ಸೌಲಭ್ಯಗಳು ತಾತ್ಕಾಲಿಕ ನೆರವು ನೀಡಬಹುದು. ಆದರೆ ದೀರ್ಘಕಾಲೀನ ಅಭಿವೃದ್ಧಿಗೆ ಅಗತ್ಯವಾದವುಗಳು:**

* ಕಾನೂನುಗಳ ಕಟ್ಟುನಿಟ್ಟಿನಿಂದ ಜಾರಿಗೆ ತರುವದು.
* ಮಹಿಳಾ ಮತ್ತು ಮಕ್ಕಳ ಸುರಕ್ಷತಾ ವ್ಯವಸ್ಥೆ
* ಗುಣಮಟ್ಟದ ಶಿಕ್ಷಣ
* ಸಾವಯವ ಕೃಷಿಗೆ ಪ್ರೋತ್ಸಾಹ
* ಆಹಾರದಲ್ಲಿ ಕಲಬೆರಿಕೆ ವಿರುದ್ಧ ಕಠಿಣ ಕ್ರಮ
* ಜನರಲ್ಲಿ ಜಾಗೃತಿ ಮತ್ತು ಜವಾಬ್ದಾರಿ
* ಆರೋಗ್ಯಕರ ವಾತಾವರಣ ಮತ್ತು ಚಿಕಿತ್ಸೆಗಳು.
* ವಿಷ ಉಗಳುವ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಕ್ರಮ.
* ಲಂಚರಹಿತ ಆಡಳಿತ.

ಉಚಿತವಾಗಿ ಕೊಡುವುದಕ್ಕಿಂತ ಯೋಗ್ಯವಾದನ್ನು, ಗುಣಮಟ್ಟದನ್ನು, ಸುರಕ್ಷಿತವಾದನ್ನು ನೀಡುವುದು ಸರ್ಕಾರದ ನಿಜವಾದ ಜವಾಬ್ದಾರಿ.

ಸಮಾಜದ ಪ್ರಗತಿ ಹಣದ ಪ್ರಮಾಣದಿಂದ ಅಳೆಯಲಾಗುವುದಿಲ್ಲ;

ಅದು ಮಹಿಳೆಯರ ಸುರಕ್ಷತೆಯಿಂದ, ಮಕ್ಕಳ ಆರೋಗ್ಯದಿಂದ, ಶಿಕ್ಷಣದ ಗುಣಮಟ್ಟದಿಂದ ಅಳೆಯಬೇಕು.

ಉಚಿತ ಸೌಲಭ್ಯಗಳು ನಮ್ಮನ್ನು ಸಂತೋಷಪಡಿಸಬಹುದು.

ಆದರೆ ಸುರಕ್ಷತೆ, ಆರೋಗ್ಯ, ಮಾನವೀಯತೆ?ಇವುಗಳೇ ನಿಜವಾದ ಸಮೃದ್ಧಿಯ ಸೂಚಕಗಳು.

ಮತ್ತೊಂದು ಮನದ ಮಾತು ಮತ್ತೆ ಮುಂದಿನ ವಾರ.

# ಶಿವರಾತ್ರಿ, ಶಿವನ ಆರಾಧನೆಯ ದಿನ



ಶಿವ ನಮ್ಮ ಆರಾಧ್ಯ ದೈವ. ಸ್ಮಶಾನವಾಸಿ, ಜಟಾ ವಲ್ಕಲಧಾರಿ, ಮಂಗಳ ರೂಪದಾರಿ, ಚಂದ್ರಶೇಖರ, ಗಂಗಾಧರ, ಶಶಿಧರ, ಶಂಕರ ಭಸ್ಮಧಾರಿ, ಜಗದೀಶ, ಜಗನ್ನಾಥ, ಪಾರ್ವತಿ ಪ್ರಿಯ, ಹರ, ನಂದೀಶ್ವರ, ವಿಶ್ವನಾಥ, ವಿಶ್ವೇಶ್ವರ.

ತ್ರಿಪುಂಡ್ರಕಧಾರಿ, ಗೌರಿಶಂಕರ, ಉಮಾಮಹೇಶ್ವರ, ಎಂದು ಹಲವಾರು ನಾಮಗಳಿಂದ ಕರೆಯಲ್ಪಡುವ ಶಿವ ಅರ್ಧನಾರೀಶ್ವರನು ಹೌದು. ಹೆಣ್ಣು ಗಂಡುಗಳಿಬ್ಬರು ಸರಿಸಮ, ಅವರಲ್ಲಿ ಯಾವುದೇ ಭೇದವಿಲ್ಲ ಎಂದು ಸೂಚಿಸುವ ಅರ್ಧನಾರೀಶ್ವರ ತತ್ವವನ್ನು ಜಗತ್ತಿಗೆ ತೋರಿದಾತ ಶಿವ.

ವರ್ಷದ ಹನ್ನೆರಡು ತಿಂಗಳುಗಳಲ್ಲಿಯೂ ಶಿವರಾತ್ರಿಯ ದಿನ ಬರುತ್ತದೆ... ಆದರೆ ನಾವು ಮುಖ್ಯವಾಗಿ ಆಚರಿಸುವುದು ಮಾಘ ಮಾಸದ ಬಹಳ ಶುದ್ಧ ಚತುರ್ದಶಿಯಂದು ಬರುವ ಶಿವರಾತ್ರಿಯನ್ನು. ಕಾರಣವಿಷ್ಟೇ ಆ ದಿನ ದಕ್ಷಯಜ್ಞದಲ್ಲಿ ತನ್ನನ್ನೇ ತಾನು ಅಗ್ನಿ ಆಹುತಿಗೆ ಈಡು ಮಾಡಿಕೊಂಡ ಶಿವನ ಪತ್ನಿ ಸತೀ ದೇವಿಯು ಮುಂದೆ ಹಿಮವಂತ ಮತ್ತು ಮೇನಾದೇವಿಯವರ ಮಗಳಾಗಿ ಹುಟ್ಟಿ ಶಿವನನ್ನೇ ವರಿಸಬೇಕೆಂದು ತಪಸ್ಸು ಮಾಡಿ ಆತನ ಎಲ್ಲ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಶಿವನನ್ನು ವಿವಾಹವಾದ ಸುದಿನ.

ಸ್ಕಂದಪುರಾಣದ ಪ್ರಕಾರ ಬ್ರಹ್ಮ ಮತ್ತು ವಿಷ್ಣುವಿನ ಮಧ್ಯದ ಯಾರು ಹೆಚ್ಚು ಶ್ರೇಷ್ಠರು ಎಂಬ ಹೆಚ್ಚುಗಾರಿಕೆಯ ಜಗಳ ಪರಶಿವನ ಮುಂದೆ ಬಂದಾಗ.. ಶಿವನು ಅಗ್ನಿ ಕಂಬದ ರೂಪದಲ್ಲಿ ನಿಂತು ತನ್ನ ಮೂಲವನ್ನು ಕಂಡುಹಿಡಿಯಲು ಮಹಾವಿಷ್ಣು ಮತ್ತು ಪರಬ್ರಹ್ಮನಿಗೆ ಹೇಳುತ್ತಾನೆ. ಶಿವನ ಮೂಲವನ್ನು ಕಂಡುಹಿಡಿಯಲು ಬ್ರಹ್ಮನು ಹಂಸದ ರೂಪದಲ್ಲಿ ಆಕಾಶಕ್ಕೆ ಹಾರಿದರೆ ವಿಷ್ಣು ವರಾಹ ರೂಪವನ್ನು ಧರಿಸಿ ಪಾತಾಳದತ್ತ ಹೊರಡುತ್ತಾನೆ. ಆದರೆ ಇವರಿಬ್ಬರಿಗೂ ಶಿವನ ಮೂಲವನ್ನು ಕಂಡು ಹಿಡಿಯಲು ಸಾಧ್ಯವಾಗದೆ ಹೋಗುತ್ತದೆ. ಆದರೆ ಬ್ರಹ್ಮನಿಗೆ ಶಿವನ ಜಟೆಯಿಂದ ಬೀಳುತ್ತಿದ್ದ ಕೇದಿಗೆಯ ಪುಷ್ಪವು ದೊರೆತು ಆ ಪುಷ್ಪವು ಎಲ್ಲಿಂದ ಬಂತು ಎಂದು ಕೇಳಿದಾಗ ಕೇದಗೆಯ ಪುಷ್ಪ ತಾನು ಶಿವನ ಜಟೆಯಿಂದ ಬೀಳುತ್ತಿರುವೆ ಎಂದು ಹೇಳಿತು. ಇದನ್ನು ಕೇಳಿದ ಬ್ರಹ್ಮನು ಶೀಘ್ರವೇ ಶಿವನ ಬಳಿ ಬಂದು ಶಿವನ ಮೂಲ ಭಾಗವನ್ನು ತಾನು ನೋಡಿರುವೆ ಎಂದು ಸುಳ್ಳು ಹೇಳಿದ. ಇದರಿಂದ ಕುಪಿತನಾದ ಶಿವನು ಸುಳ್ಳು ಹೇಳಿದ ಬ್ರಹ್ಮನಿಗೆ ಭೂಲೋಕದಲ್ಲಿ ನಿನ್ನನ್ನು ಯಾರೂ ಪೂಜಿಸಬಾರದು ಎಂದು ಶಾಪ ನೀಡಿ ಲಿಂಗಧಾರಿಯಾಗಿ ನೆಲೆ ನಿಂತನು. ಅದು ಕೂಡ ಶಿವರಾತ್ರಿಯ ದಿನವೇ.

ಶಿವರಾತ್ರಿಯ ದಿನವೇ ಜಗದ್ರಕ್ಷಕನಾದ ಶಿವನು ಸಮುದ್ರ ಮಂಥನದಲ್ಲಿ ದೊರೆತ ಹಾಲಾಹಲವನ್ನು ಕುಡಿದನಂತೆ. ಶಿವನ ದೇಹದಲ್ಲಿರುವ 14 ಲೋಕಗಳನ್ನು ಉಳಿಸುವ ಸಲವಾಗಿ ಪಾರ್ವತಿ ದೇವಿಯು ಶಿವನ ಕಂಠದಲ್ಲಿಯೇ ಆ ವಿಷವನ್ನು ಇಡೀ ರಾತ್ರಿ ತಡೆಹಿಡಿದಳು. ಆಗ ಎಲ್ಲ ದೇವಾನುದೇವತೆಗಳು ರಾತ್ರಿಯಿಡೀ ಭಜನೆ ಮಾಡಿ ಶಿವನ ಮೈಯಲ್ಲಿ ವಿಷವು ವ್ಯಾಪಿಸುವುದನ್ನು ತಡೆಹಿಡಿದರು... ಆದ್ದರಿಂದಲೇ ಶಿವರಾತ್ರಿಯ ದಿನ ಜಾಗರಣೆಯನ್ನು ಮಾಡಬೇಕು ಎಂದು ಶಿವ ಪುರಾಣ ಹೇಳುತ್ತದೆ.

ಶಿವಪುರಾಣದ ಇನ್ನೊಂದು ಮಾಹಿತಿಯ ಪ್ರಕಾರ ರಭಸದಿಂದ ಹರಿಯುತ್ತಿದ್ದ ಗಂಗಾ ನದಿಯನ್ನು ಶಿವನು ತನ್ನ ಜಟೆಯಲ್ಲಿ ಬಂಧಿಸಿದ್ದು ಕೂಡ ಶಿವರಾತ್ರಿಯ ದಿನವೇ.

ಶಿವರಾತ್ರಿಯ0ದು ರಾತ್ರಿ ಪೂಜೆಯೇ ವಿಶೇಷ. ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿಯ ದಿನ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆಯಿದೆ.

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನನ್ನು ಭಜಿಸಿದರೆ ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ.

ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ಹೇಳುತ್ತಾರೆ. ಇದಾವುದರ ಅರಿವಿಲ್ಲದೆ ನಾಸ್ತಿಕ ಬೇಡನೋರ್ವ ಕಾಡಲ್ಲಿ ಕಳೆದು ಹೋಗಿ ತಾನು ಕುಳಿತ ಮರದ ಮೇಲಿನ ಎಲೆಯನ್ನು ಬಿಲ್ವಪತ್ರೆಯ ಎಲೆಯೆಂದು ಗುರುತಿಸದೆ ಒಂದೊಂದಾಗಿ ಹರಿದೆಸೆದು ಶಿವನ ಕೃಪೆಗೆ ಪಾತ್ರನಾಗಿ ಮುಂದೆ ಶಿವನ ಪರಮ ಭಕ್ತನಾದವನು ಕಣ್ಣಪ್ಪ... ಶಿವನ ಕಣ್ಣಲ್ಲಿ ರಕ್ತ ಹರಿಯುತ್ತಿದ್ದುದನ್ನು ಕಂಡು ತನ್ನದೇ ಕಣ್ಣುಗಳನ್ನು ಶರದಿಂದ ಕಿತ್ತಿ ಶಿವನಿಗೆ ಕೊಟ್ಟ ಪರಮ ಶಿವಭಕ್ತ ಬೇಡರ ಕಣ್ಣಪ್ಪನಾದ.


ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಆಡಂಬರಗಳಿಂದ ಮುಕ್ತನಾದ ಅವಿಮುಕ್ತಕ. ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವವನು.

ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಷ್ಕಲ್ಮಶವಾದ ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸಭರಿತರಾಗಿ ಶಿವರಾತ್ರಿಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ.

ಶಿವನು ಅಭಿಷೇಕ ಪ್ರಿಯ ಅಂತೆಯೇ ಶಿವರಾತ್ರಿಯ ದಿನ ಮುಂಜಾನೆಯೇ ಸ್ನಾನ ಮಾಡಿ ಶಿವನನ್ನು ಪೂಜಿಸುತ್ತಾರೆ ಇಡೀ ದಿನ ತಮಗೆ ನೀಗಿದಂತೆ ಕಟ್ಟುಪವಾಸ, ನಿರಾಹಾರ ಮಾಡುತ್ತಾರೆ. ಹಾಗೆ ಮಾಡಲಾಗದವರು ಹಣ್ಣು ಹಾಲು ಸೇವಿಸುತ್ತಾ ಶಿವನನ್ನು ಧ್ಯಾನಿಸುತ್ತಾ ಕಳೆಯುತ್ತಾರೆ. ಸಾಯಂಕಾಲದ ಸಮಯದಲ್ಲಿ ಮನೆಯ ಜನರೆಲ್ಲ ಸೇರಿಕೊಂಡು ಮನೆಯ ದೇವರ ಕೋಣೆಯಲ್ಲಿ ದೊಡ್ಡದಾದ ಪಾತ್ರೆಯನ್ನು ಇರಿಸಿಕೊಂಡು ಅದರಲ್ಲಿ ಮನೆಯ ದೇವರ ಜಗಲಿಯಲ್ಲಿರುವ ಎಲ್ಲಾ ದೇವರ ವಿಗ್ರಹಗಳನ್ನು ಇಟ್ಟು, ತಮ್ಮ ತಮ್ಮ ಇಷ್ಟಲಿಂಗಗಳನ್ನು ಕೈಯಲ್ಲಿ ಹಿಡಿದು ಪಂಚಾಮೃತಾಭಿಷೇಕ, ಭಸ್ಮ ಧಾರಣೆ, ಪುಷ್ಪಧಾರಣೆ, ಧೂಪ–ದೀಪಗಳ ಆರತಿ ಬೆಳಗಿ ಉತ್ತರಾಣಿ ಕಡ್ಡಿಯ ತುದಿಗೆ ತುಪ್ಪದಲ್ಲಿ ಅದ್ದಿ ನೆನೆಸಿದ ಹತ್ತಿಯನ್ನು ಮೆತ್ತಿ ಅದಕ್ಕೆ ದೀಪವನ್ನು ಸೋಕಿಸಿ ಆರತಿ ಮಾಡಿ ವಿವಿಧ ಬಗೆಯ ಬಾಳೆ ಚಿಕ್ಕು ಸೇಬು ಕಿತ್ತಳೆ ಕಲ್ಲಂಗಡಿ ಖರ್ಜೂರಹಣ್ಣುಗಳನ್ನು ಮತ್ತು ಒಣ ಹಣ್ಣುಗಳಾದ ದ್ರಾಕ್ಷಿ ಗೋಡಂಬಿ ಕೇರಬೀಜ, ಬಾದಾಮಿಗಳನ್ನು ನೈವೇದ್ಯಕ್ಕೆ ಅರ್ಪಿಸುತ್ತಾರೆ. ಇದರ ಜೊತೆ ಜೊತೆಗೆ ಕಡಲೆ ಕಾಳಿನ ಉಸುಳಿ, ಗೋಧಿ ಹಿಟ್ಟಿನ ಅರಳಿಟ್ಟು, ಇಲ್ಲವೇ ಹಿಟ್ಟಿನ ಸಿಣ್ಣಿ, ಕೋಸಂಬರಿ, ಅವಲಕ್ಕಿ ಇಲ್ಲವೇ ಮಂಡಾಳು ಒಗ್ಗರಣೆಗಳನ್ನು ನೈವೇದ್ಯಕ್ಕಾಗಿ ತಯಾರಿಸಿ ಅರ್ಪಿಸುತ್ತಾರೆ.ಹೀಗೆ ಐದು ಬಾರಿ ಪಂಚಾಮೃತ ಅಭಿಷೇಕವನ್ನು ಪುನರಾವರ್ತಿಸಿ ಐದನೇ ಪೂಜೆಯನ್ನು ಮಾಡಿದ ನಂತರ ಕೈಯಲ್ಲಿರುವ ಇಷ್ಟ ಲಿಂಗವನ್ನು ಚೆನ್ನಾಗಿ ಒರೆಸಿ ಜಗಲಿಯ ಮೇಲೆ ಇಲ್ಲವೇ ಕೊರಳಲ್ಲಿ ಕಟ್ಟಿಕೊಂಡ ಕರಡಿಗೆಯಲ್ಲಿ ಇಡುವ ಮೂಲಕ ಸ್ವಸ್ಥಾನವನ್ನು ಸೇರಿಸುತ್ತಾರೆ. ಮನೆಯಲ್ಲಿ ಪಂಚಾಮೃತಾಭಿಷೇಕ ಮಾಡಲು ಅನುಕೂಲ ಇಲ್ಲದವರು ದೇವಸ್ಥಾನಗಳಿಗೆ ಹೋಗಿ ಅಲ್ಲಿಯೇ ಪೂಜೆ ನೆರವೇರಿಸುತ್ತಾರೆ. ಇನ್ನೂ ಕೆಲವೆಡೆ ಮನೆಯಲ್ಲಿಯ ಪೂಜೆಯ ನಂತರ ದೇವಸ್ಥಾನಗಳಿಗೂ ಹೋಗಿ ಪೂಜೆ ಸಲ್ಲಿಸಿ, ಪರಶಿವನ ಅನುಗ್ರಹಕ್ಕೆ ಪಾತ್ರರಾದ ತೃಪ್ತಿಯನ್ನು ಅನುಭವಿಸುತ್ತಾರೆ. ನಂತರ ಮನೆಗೆ ಬಂದು ಉಪವಾಸವನ್ನು ಮುಕ್ತಾಯಗೊಳಿಸಿ ಆಹಾರವನ್ನು ಸೇವಿಸುತ್ತಾರೆ.

ಆದರೆ ನಿಜವಾದ ಪರೀಕ್ಷೆ ಇರುವುದೇ ಇಲ್ಲಿ... ಬೆಳಗಿನಿಂದ ಧ್ಯಾನದಲ್ಲಿ ಇನ್ನಿತರ ಕೆಲಸಗಳಲ್ಲಿ ಮುಳುಗಿರುವ ಜನ ಸ್ನಾನ ಪೂಜೆಯ ನಂತರ ಆಹಾರವನ್ನು ಸೇವಿಸಿದಾಗ ಉಂಟಾಗುವ ಸಹಜವಾದ ನಿದ್ರೆಯನ್ನು ತಡೆಯುವ ಪ್ರಯತ್ನವೇ ಜಾಗರಣೆ. ಹಲವಾರು ಜನ ದೇವಸ್ಥಾನಗಳಲ್ಲಿ ಶಿವನ ಕುರಿತಾದ ಭಜನೆ ಗಾಯನ ಇನ್ನಿತರ ಕಾರ್ಯಕ್ರಮಗಳನ್ನು ನೋಡುತ್ತಾ, ಹಾಡುತ್ತಾ ಕೇಳುತ್ತಾ ಇಡೀ ರಾತ್ರಿ ಜಾಗರಣೆಯನ್ನು ಮಾಡುತ್ತಾರೆ. ಹೀಗೆ ಜಾಗರಣೆ ಮಾಡುವುದರಿಂದ ಪಾರ್ವತಿ ಪರಮೇಶ್ವರರು ಶಿವರಾತ್ರಿಯಂದು ಎಲ್ಲ ಲಿಂಗ ಸ್ಥಾಪಿತ ಸ್ಥಾನಗಳಲ್ಲಿ ಬಂದು ಸ್ಥಾವರ ಲಿಂಗಗಳಲ್ಲಿ ಐಕ್ಯನಾಗಿ ತಮ್ಮನ್ನು ಆಶೀರ್ವದಿಸುವನೆಂಬ ನಂಬಿಕೆ ನಮ್ಮ ಪೂರ್ವಜರದು.

ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ. ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.



| ವೀಣಾ ಹೇಮಂತ್‌ಗೌಡ ಪಾಟೀಲ್

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ತಿಲಗಿ ಪುಷ್ಪ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ.

ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಎಲ್ಲಾ ಆಡಂಬರಗಳಿಂದ ಮುಕ್ತ. ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ.

ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಶ್ಕಲ್ಮಶ ಮತ್ತು ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸ ಭರಿತರಾಗಿ ಶಿವರಾತ್ರಿಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ. ಶಿವ ಶಿವ ಎಂದರೆ ಭಯವಿಲ್ಲ ಶಿವನಾಮಕೆ ಎಂದು ಸಾಟಿಯಿಲ್ಲ"... ಎಂದು ಶ್ರದ್ಧಾ ಭಕ್ತಿಯಿಂದ ಭಜಿಸುತ್ತಾ

**ಶಿವರಾತ್ರಿಯ ಆಚರಣೆಯಲ್ಲಿ ಪಾಲ್ಗೊಂಡು ಶಿವ ಕೃಪೆಗೆ ಪಾತ್ರರಾಗೋಣ**

# ದರ್ಪ ಎನ್ನುವ ದರ್ಪಣ




ದರ್ಪ ತೋರಿಸುವ ಗಂಡಸು ಹೆಣ್ಣನ್ನು ಬಿಟ್ಟು ಏನೂ ಕೆಲಸ ಮಾಡಲು ಸಾಧ್ಯವಿಲ್ಲ!

ಏಕೆಂದರೆ ಆ ದರ್ಪದ ಸ್ವಭಾವದಿಂದಾಗಿ ಅವರು ಮೈಗಳ್ಳರಾಗಿರುತ್ತಾರೆ, ಯಾವುದೇ ಕೆಲಸ ಹೆಂಡತಿ, ಮಕ್ಕಳ ಸಹಾಯವಿಲ್ಲದೆ ನಡೆಯುವುದಿಲ್ಲ! ಆದರೆ ಪ್ರೀತಿಯಿಂದ ಅವರನ್ನು ನಡೆಸಿಕೊಳ್ಳಲು ಅವರಿಗೆ ದರ್ಪವೆಂಬ ಹಗ್ಗ ಬಾಯಿಯನ್ನು ಕಟ್ಟಿ ಹಾಕಿರುತ್ತದೆ!

ತಮ್ಮ ಮನೆ ಹೇಗಿರಬೇಕು ಎಂದು ಹೆಂಡತಿಗಿಂತ ಗಂಡಸೇ ನಿರ್ಧರಿಸುವುದು ಕಾಣುತ್ತೇವೆ! ಇದರಿಂದ ಆಕೆಗೆ ತಾನು ಆ ಮನೆಯ ಒಂದು ವಸ್ತು ಎನ್ನುವ ಭಾವನೆ ಬರುತ್ತದೆ ಹೊರತು ಮನೆಯ ಆಗು ಹೋಗುಗಳ ನಿರ್ಧಾರದಲ್ಲಿ ತನ್ನ ಪಾಲು, ಅಸ್ತಿತ್ವವಿದೆ ಎಂದು ಅನ್ನಿಸುವುದೇ ಇಲ್ಲ!

ಸ್ನೇಹ ಲೋಕ

ಇಷ್ಟಾದರೂ ಅಂತಹ ಗಂಡಸರಿಗೆ ಒಂದೇ ಒಂದು ದಿನ ಹೆಂಡತಿ ಮನೆ ಬಿಟ್ಟು ಹೋದರೆ ಸಾಕು ವಿಚಲಿತಗೊಳ್ಳುತ್ತಾರೆ, ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳಲು ಸಾಧ್ಯವಾಗದೆ, ಚಹಾ, ಕಾಫಿಯನ್ನೂ ಮಾಡಿಕೊಂಡು ಗೊತ್ತಿರದೆ ವಿಚಿತ್ರವಾಗಿ ಚಡಪಡಿಸುತ್ತಾರೆ! ಆದರೆ ಅಂತಹ ಗಂಡಸರಿಗೆ ಹೆಂಡತಿ ಗುಲಾಮಳಾಗಿ, ಭೋಗದ ವಸ್ತುವಾಗಿ ಮಾತ್ರ ಕಾಣುತ್ತಾಳೆ! ಅವಳಲ್ಲಿರುವ ಒಂದು ಅಗಾಧ ವಿಶೇಷ ವ್ಯಕ್ತಿತ್ವದ ಪರಿಚಯವೇ ಅವರಿಗೆ ಇರುವುದಿಲ್ಲ!



| ಸ್ನೇಹಾ ಆನಂದ್

ಹೆಣ್ಣನ್ನು ತಮಗಿಂತ ಕೆಳಮಟ್ಟದಲ್ಲಿ ನೋಡುವ ಎಷ್ಟೋ ಗಂಡಸರಲ್ಲಿ ಈ ದರ್ಪವೆಂಬ ಹಾವು ಮನದಲ್ಲಿ ಯಾವಾಗಲೂ ಸುತ್ತಿಕೊಂಡು ಭುಸುಗುಡುತ್ತಿರುತ್ತದೆ! ಅದರಿಂದ ಅವರ ದೆಬ್ಬಾಳಿಕೆಯಲ್ಲಿ ಸಿಕ್ಕ ಮನೆಯ ಮಂದಿ ಅವರು ಮನೆಯಿಂದ ಹೊರಗಡೆಗೆ ಹೋದಾಗ ಅವರು ಬರುವವರೆಗೂ ಸರಾಗವಾಗಿ ಉಸಿರಾಡುತ್ತಾರೆ!

ಇನ್ನೊಂದು ಕೆಟಗರಿಯ ಗಂಡಸರಿರುತ್ತಾರೆ, ಪ್ರತಿಯೊಂದು ಕೆಲಸದಲ್ಲೂ ತಾವು ಭಾಗಿಯಾಗುತ್ತಾರೆ ಆದರೆ ಎಲ್ಲ ಕಡೆಗೂ ತಮ್ಮ ಅಧಿಕಾರವನ್ನೇ ಚಲಾಯಿಸುತ್ತಾರೆ! ಮನೆಯ ಬಗ್ಗೆ ಹೆಂಡತಿ ತೆಗೆದುಕೊಳ್ಳಬೇಕಾದ ಪ್ರತಿಯೊಂದು ನಿರ್ಧಾರವನ್ನು ತಾವೇ ತೆಗೆದುಕೊಳ್ಳುತ್ತಾರೆ! ಅವರಿಗೆ ಹೆಂಡತಿಯನ್ನೂ ಆ ವಿಚಾರದ ಬಗ್ಗೆ ಒಂದು ಮಾತು ಕೇಳಬೇಕು ಎಂದು ಅನ್ನಿಸುವುದೇ ಇಲ್ಲ! ನನ್ನಷ್ಟು ಅವಳಿಗೇನು ತಿಳಿದಿದೆ ಬಿಡು ಎನ್ನುವ ಅಂಥ ಭಾವನೆ!

ಹೆಣ್ಣನ್ನು ದರ್ಪದಿಂದ ಹಿಡಿತದಟ್ಟು ಕೊಳ್ಳುವದಕ್ಕಿಂತ ಪ್ರೀತಿಯಿಂದ ಹಿಡಿದಿಟ್ಟು ಕೊಂಡು ನೋಡಬೇಕು, ಆಗ ಹೆಣ್ಣು ಅನಿವಾರ್ಯ ಎಂದು ನಿರಾಸಕ್ತಿಯಿಂದ ಮಾಡುವ ಪ್ರತಿಯೊಂದು ಕೆಲಸವನ್ನು ಅತಿ ಇಷ್ಟ ಪಟ್ಟು ಆಸಕ್ತಿವಹಿಸಿ ಮಾಡುತ್ತಾಳೆ! ಜಾಣ್ಮೆ ಎನ್ನುವುದು ಹೆಣ್ಣಿನಲ್ಲಿ ಯಾವಾಗಲೂ ಜಾಗೃತವಾಗಿದೆ ಆದರೆ ಅದನ್ನು ಹೊರ ಜಗತ್ತಿನಲ್ಲಿ ತೋರಿಸದೇ ಅವಳು ಕುಟುಂಬದ ಸದಸ್ಯರಿಗಾಗಿಯೇ ಮೀಸಲಿಡುತ್ತಾಳೆ, ಗಂಡ, ಮಕ್ಕಳು, ಮುಂದೆ ಬಂದಾಗ ಅವಳು ಅದನ್ನು ತನ್ನ ಸ್ವಂತ ಗೆಲುವು ಎಂದು ತಿಳಿದು ಬೀಗುತ್ತಾಳೆ! ಇಂತಹ ಅನೇಕ ಹೆಣ್ಣು ಮಕ್ಕಳಿಂದಲೇ ಕುಟುಂಬವು ಗಟ್ಟಿಯಾಗಿ ನಿಂತಿರುವುದು! ಹೀಗಾಗಿ ಆ ಮನೆಯ ಬುನಾದಿ ಹೆಣ್ಣೇ ಎಂದರೆ ಸುಳ್ಳಲ್ಲ!

ಹೆಣ್ಣು ಎಲ್ಲವನ್ನೂ ಬೇಗ ಗ್ರಹಿಸುತ್ತಾಳೆ, ಅವಳ ಕಣ್ಣು ಪ್ರತಿಯೊಂದನ್ನು ಸೂಕ್ಷ್ಮವಾಗಿ ನೋಡುತ್ತದೆ , ಇದರಿಂದ ಗಂಡು ಕಾಣದ, ನೋಡದ,ಕೇಳದ ಎಷ್ಟೋ ವಿಷಯಗಳನ್ನು ಅವಳು ಗ್ರಹಿಸುತ್ತಾಳೆ, ಹೀಗಾಗಿ ಹೆಣ್ಣು ಮಕ್ಕಳು ಕುಟುಂಬದ ವಿಷಯದಲ್ಲಿ ತುಂಬಾ ಜಾಗ್ರತೆ ವಹಿಸುವುದು, ಮಕ್ಕಳು ವಯಸ್ಸಿಗೆ ಬಂದಾಗ ಅವರ ಬಗ್ಗೆ ಆತಂಕ ಪಡುವುದು, ಅತಿಯಾದ ಕಾಳಜಿ ತೋರುವುದು!

ಮಕ್ಕಳ ನಡುವಳಿಕೆಯ ಬದಲಾವಣೆ ಮೊತ್ತ ಮೊದಲು ತಾಯಿಗೆ ಮಾತ್ರ ತಿಳಿಯುವುದು!

ಮಕ್ಕಳು ಮಾಡುವ ತಪ್ಪು ತಾಯಿಯ ಕಣ್ಣಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಆದರೆ ಅವಳು ಮಕ್ಕಳ ಮೇಲಿನ ಮೋಹದಿಂದ ಅದನ್ನು ಕಡೆಗಣಿಸುವ ಸಾಧ್ಯತೆ ಇರುತ್ತದೆ ಅಷ್ಟೇ!

ಮನೆಯಲ್ಲಿ ಆಗುಹೋಗುಗಳ ಲೆಕ್ಕ ಹೆಂಗಸರೇ ಇಡುವುದರಿಂದ ಅವರಿಗೆ ವಿಶೇಷ ಗಣಿತದ ಲೆಕ್ಕಾಚಾರ ಬೇಕಿಲ್ಲ! ಹೀಗಾಗಿ ಯಾರೇ ಆಗಲಿ, ತಾಯಿ, ಹೆಂಡತಿ, ಅಕ್ಕ, ತಂಗಿ ಅತ್ತಿಗೆ, ನಾದಿನಿ ಯಾರೇ ಇರಲಿ ಮೊದಲು ಅವರ ಬಗ್ಗೆ ನಂಬಿಕೆ, ವಿಶ್ವಾಸ, ಅಭಿಮಾನವಿಟ್ಟು ನೋಡಿ ನೀವು ಆಗ ಜಗತ್ತನ್ನೇ ಗೆದಿಯುತ್ತೀರಿ! ಹೆಣ್ಣಿನಲ್ಲಿ ದೈಹಿಕ ಶಕ್ತಿ ಕಡಿಮೆ ಇರಬಹುದು ಮಾನಸಿಕ ಯುಕ್ತಿ ಜಾಸ್ತಿ , ಹೊರ ಜಗತ್ತಿನ ಜ್ಞಾನ ಕಡಿಮೆ ಇರಬಹುದು ಆದರೆ ಅವಳಲ್ಲಿರುವ ಆಂತರಿಕ ಜ್ಞಾನ ಅಗಾಧ! ಆದರೆ ಅವಳು ಅದನ್ನು ತಾನಾಗಿಯೇ ತೋರ್ಪಡಿಸುವುದಿಲ್ಲ! ಹೀಗಾಗಿ ಹೆಣ್ಣು ಮಕ್ಕಳು ಪ್ರೀತಿ, ವಾತ್ಸಲ್ಯ ಕೊಡುವುದರಲ್ಲಿ ಎತ್ತಿದ ಕೈ! ಅವಳಿಗೆ ತನ್ನ ಮನೆ, ಮಕ್ಕಳು ಅವರ ಓದು, ವಿದ್ಯಾಭ್ಯಾಸದ ಬಗ್ಗೆ ಅತಿಯಾದ ಅಭಿಮಾನವಿರುತ್ತದೆ ಹೊರತು ತನ್ನ ವ್ಯಕ್ತಿತ್ವದ ಬಗ್ಗೆ ಸ್ವಂತ ಗರ್ವ ಇರುವುದು ಅತ್ಯಂತ ಕಡಿಮೆ , ಈ ಪಟ್ಟ ಏನಿದ್ದರೂ ಹೆಚ್ಚಾಗಿ ಗಂಡಸರಿಗೆ ಸರಿ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,